Mr. SPEAKER.—The question is:

"That the Mysore Tenancy Laws (Amendment) Bill, 1963, be taken into consideration."

The motion was adopted.

Mr. SPEAKER.—The question is:

"That Clauses 2 to 5, both inclusive, stand part of the Bill."

The motion was adopted.

Clauses 2 to 5, both inclusive, were added to the Bill.

Mr. SPEAKER.—The question is:

"That Clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri M. V. KRISHNAPPA.—I beg to move:

"That the Mysore Tenancy Laws (Amendment) Bill, 1963, be passed."

Mr. SPEAKER.—The question is:

'That the Mysore Tenancy Laws (Amendment) Bill, 1963, be passed.'

The motion was adopted.

MYSORE TENANTS (TEMPORARY PROTECTION FROM EVICTION) BILL, 1963.

Motion to consider

Sri M. V. KRISHNAPPA.—Sir, I beg to move:

"That the Mysore Tenants (Temporary Protection from Eviction) Bill, 1963, be taken into consideration."

Mr. SPEAKER.—Motion moved:

"That the Mysore Tenants (Temporary Protection from Eviction) Bill, 1963, be taken into consideration."

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮೀ, ಇದು ಕೂಡ ಈ ಹಿಂದೆ ಪಾಸಾದ ಮೈಸೂರು ಟೆನೆನ್ಸಿ (ಅಮೆಂಡ್‌ಮೆಂಟ್) ಬಿಲ್, 1963 ರ ಹಾಗೆ, ಒಂದು ತಿದ್ದುಪಡಿಯ ಮಸೂದೆಯಾಗಿದೆ. ಇದನ್ನೂ ಶ್ರೀಮಾನ್ ಮುಕ್ಕಣ್ಣಪ್ಪನವರೂ ಮತ್ತು ಶ್ರೀಮಾನ್ ಗೋಪಾಲಗೌಡರು ಈಗಾಗಲೇ ಒಪ್ಪಿದಂತೆ ಒಪ್ಪುತ್ತಾರೆಂದು ಭಾವಿಸುತ್ತೇನೆ. 1962 ನೆಯ ಟೆನೆನ್ಸಿ ಆಕ್ಟಿನಂತೆ ರಿಪೀಟು ಮಾಡಬೇಕಾಗಿದೆ, ಅಲ್ಲದೆ ಭೂ ಸುಧಾರಣೆ ಮಸೂದೆ ಜಾರಿಗೆ ಬರುವುದು ತಡವಾಗುತ್ತದೆ. ಆದ ಕಾರಣ ಈ ಶಾಸನ

(ಶ್ರೀ ಎಂ. ವಿ. ಕೃಷ್ಣಪ್ಪ)

ದಿಂದ ಟೆಂಪರರಿ ಪ್ರೊಟೆಕ್ಷನ್ನು ಕೊಟ್ಟು ಎವಿಕ್ಷನ್ನನ್ನು ತಪ್ಪಿಸಿ ರಕ್ಷಣೆ ಕೊಡುವ ಉದ್ದೇಶದಿಂದ ಹಾಗೂ ರಕ್ಷಣೆ ಕೊಡಬೇಕೆಂಬ ಉದ್ದೇಶದಿಂದ ಈ ಮಸೂದೆಯನ್ನು ತರಲಾಗಿದೆ. ಮಾನ್ಯ ಸದಸ್ಯರಿಗೇ ತಿಳಿದಿರುವಂತೆ ಈ ಮಸೂದೆಯ ಅವಧಿ 1963 ನೇ ಮಾರ್ಚಿ 31 ನೇ ತಾರೀಖಿಗೆ ಮುಗಿಯುತ್ತದೆ, ಇದನ್ನು ಇನ್ನೂ ಒಂದು ವರ್ಷ ಮುಂದಕ್ಕೆ ಬಾರಿಗೆ ಗೇಣೀದಾರರಿಗೆ ರಕ್ಷಣೆ ಕೊಡುವುದು ಈ ಮಸೂದೆಯ ಉದ್ದೇಶವಾಗಿದೆ. ಅಲ್ಲದೆ ಭೂ ಸುಧಾರಣೆಯನ್ನು ತರುವುದು ಇನ್ನೂ ತಡವಾಗುತ್ತಿರುವುದರಿಂದ ಈ ಕಾನೂನನ್ನು ತರಲಾಗಿದೆ. ಅಲ್ಲದೆ ಹಿಂದಿದ್ದ ಕಾನೂನಿನಲ್ಲಿ ಸೈನ್ಯಕ್ಕೆ ಹೋಗಿ ವಾಪಸು ಬಂದಂಥಹ ಸಿಪಾಯಿಗಳಿಗೆ ಅವರುಗಳು ಗೇಣೀದಾರರಿಗೆ ಕೊಟ್ಟಿದ್ದ ಜಮೀನನ್ನು ವಾಪಸು ಪಡೆಯುವ ಒಂದು ಅವಕಾಶವಿತ್ತು. ಆದರೆ ಸಿಪಾಯಿಗಳು ಸೈನ್ಯಕ್ಕೆ ಸೇರಿ ದೇಶ ಸೇವೆಗಾಗಿ ಯುದ್ಧ ಮಾಡುತ್ತಾರೆ. ಅವರ ಭೂಮಿಯೆಲ್ಲವನ್ನೂ ಪೂರ್ತಿ ಗೇಣೀದಾರರೇ ಸಾಗುವಳಿ ಮಾಡುತ್ತಿದ್ದರು, ಆದರೆ ಅವರು ವಾಪಸು ಬಂದು ತಮ್ಮ ಜಮೀನನ್ನು ಬೇಕೆಂದು ಕೇಳಿದರೆ ಅವರಿಗೆ ವಾಪಸು ಕೊಡಲು ಅವಕಾಶ ಬೇಕು. ಅಲ್ಲದೆ ಅವರನ್ನು ಎವಿಕ್ಟ್ ಮಾಡುವುದಕ್ಕೆ ಆಗುವುದಿಲ್ಲ, ಈ ತೊಂದರೆಯನ್ನು ನೂರಾರು ಸಿಪಾಯಿಗಳು ಯುದ್ಧದಿಂದ ವಾಪಸು ಬಂದವರು ಸರಕಾರಕ್ಕೆ ರೆಪ್ರೆಸೆಂಟು ಮಾಡಿದರು. ಅವರುಗಳು ನಾವು ಯುದ್ಧದಲ್ಲಿ ಸೇವೆ ಮಾಡಲು ಹೋಗಿ ವಾಪಸು ಬಂದಿರುವುದರಿಂದ ನಮಗೆ ಸರಿಯಾದ ರಕ್ಷಣೆ ಕೊಡಬೇಕು ಅಲ್ಲದೆ ಅವರು ಸಾಗುವಳಿ ಮಾಡುತ್ತಿದ್ದ ಜಮೀನನ್ನು ವಾಪಸು ಕೊಡಬೇಕು ಮತ್ತು ತಮ್ಮ ಹಿಡುವಳಿಗಳನ್ನು ಉಳಿಸಿ ಕೊಡಬೇಕೆಂದೂ ಹೇಳಿದರು. ಆದರಂತೆ Armed forces ನವರಿಗೂ ಇದರಲ್ಲಿ ಒಂದು ಅವಕಾಶವನ್ನು ಕೊಡಲಾಗಿದೆ. ಇದನ್ನು ಮಾನ್ಯ ಸಭೆಯವರು ಒಪ್ಪುತ್ತಾರೆಂದು ಆಶಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ, (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಅಮೆಂಡಿಂಗ್ ಬಿಲ್ ಮೇಲೆ ಅನೇಕ ಮಾನ್ಯ ಮಿತ್ರರು ಈಗಾಗಲೇ ಮಾತನಾಡಿದ್ದಾರೆ, ಜಮೀನನ್ನು ಹಿಡುವಳಿದಾರರಿಂದ ತೆಗೆದುಕೊಂಡು ಸಾಗುವಳಿ ಮಾಡತಕ್ಕ ರೈತರ ವಿಚಾರದಲ್ಲಿ ಕನಿಕರವನ್ನು ಇಟ್ಟು ಅವರಿಗೇ ಆದಷ್ಟು ಸಹಾಯ ಮಾಡಬೇಕು, ಜಮೀನಿಲ್ಲದೇ ಹೋದರೆ, ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು ಈಗತಾನೇ ಹೇಳಿದ ಹಾಗೆ, ಜಮೀನನ್ನು ಕೊಡಬೇಕು ಮತ್ತು ಸ್ವಂತವಾಗಿ ಜಮೀನಿರುವವರಿಗೂ ಅನುಕೂಲವನ್ನು ಸರಕಾರ ಮಾಡಿ ಕೊಟ್ಟರೆ ಬಹಳ ಸಂತೋಷವಾಗುತ್ತಿತ್ತು. ಆದರೆ ಇವೊತ್ತು ಈ ಒಂದು ಕಾನೂನಿನ ದೆಸೆಯಿಂದ ಜಮೀನನ್ನು ಹೊಂದಿರತಕ್ಕ ಜನಕ್ಕೆ ಆಗುತ್ತಿರುವ ತೊಂದರೆಯನ್ನು ನಾವು ಸಲ್ಪ ಯೋಚನೆ ಮಾಡಬೇಕಾಗಿದೆ. ಅದರಲ್ಲೂ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಈಗ್ಗೆ ಐದು ವರ್ಷಗಳಿಂದ ಕೊಡತಕ್ಕವಾರ, ಅಥವಾ ಗುತ್ತಿಗೆಯನ್ನು ಕೊಡದೇ ಈ ಕಾನೂನಿನ ಆಶ್ರಯದಲ್ಲಿ ಜಮೀನುದಾರರುಗಳಿಗೆ ಬಹಳ ಕಿರುಕುಳಕೊಟ್ಟಿರತಕ್ಕ ನಿದರ್ಶನಗಳು ಒಂದಲ್ಲ ನೂರಾರು ಕಡೆ ಇವೆ. ಇದರಲ್ಲೂ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಹೇಳಿದ ಹಾಗೆ, ಅನೇಕ ಗ್ರಾಮಗಳಲ್ಲಿ ಇನಾಂತಿ ಜಮೀನುಗಳಿದ್ದುವು. ಇನಾಂತಿ ರದ್ದಾದ ಮೇಲೆ ರೈತರಿಗೆ ಕಿರುಕುಳಗಳಾಗಿದ್ದರೆ ಸಹಜವಾಗಿ ಅವರಿಗೆ ಸ್ವಲ್ಪ ಅನುಕೂಲ ಮಾಡಿ ಕೊಡಬೇಕೆನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ನಾನಾ ಕಾರಣಗಳಿಗಾಗಿ ರೈತನಾದವನು ಜಮೀನನ್ನು ಗೇಣಿಗಾಗಿ ತೆಗೆದುಕೊಂಡಿರುವ ಜಮೀನುದಾರನಿಗೆ ಒಪ್ಪಂದದಂತೆ ಕೊಡಬೇಕಾದ ವಾರವನ್ನೋ, ಗುತ್ತಿಗೆಯನನ್ನೋ ಕಾನೂನಿನಲ್ಲಿ ನಿಗದಿ ಮಾಡಿರುವಂತೆ ಇರುವ ಪರಿಮಿತಿಯನ್ನು ಕೊಡಬೇಕು. ಆದರೆ ಅವರಿಗೆ ಕಾನೂನಿನ ತಿಳುವಳಿಕೆಯೇ ಇಲ್ಲದೆ, ಕಾನೂನು ತಮ್ಮ ಪರವಾಗಿದೆ ಎಂದು ರೈತರು ಇದನ್ನು ಬಹುಮಟ್ಟಿಗೆ ದುರುಪಯೋಗ ಮಾಡಿಕೊಂಡಿದ್ದಾರೆ. ಸರಕಾರ ನನ್ನ ಹಿಂದೆ ಇದೆ ಎಂದು ಜಮೀನುದಾರರಿಗೆ ಈ ರೈತರು ಬಹಳ ಕಿರುಕುಳಗಳನ್ನು ಕೊಡುತ್ತಿದ್ದಾರೆ. ಇದನ್ನು ಸರಕಾರದವರು ಮತ್ತು ನಾವೆಲ್ಲರೂ ಹೇಗೆ ಪರಿಹಾರ ಮಾಡಬೇಕೆನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಈಗ್ಗೆ ಐದು ವರ್ಷಗಳಿಂದಲೂ ಈ ಕಾನೂನನ್ನು ಮಾಡದೆ ಮುಂದೆ ಹೋಗುತ್ತಿದ್ದಾರೆ. ಇನ್ನೂ ಎಷ್ಟು ದಿವಸ ಈ ಅವಕಾಶ ಇದೇರೀತಿ ಆಗುತ್ತದೋಗೊತ್ತಿಲ್ಲ. ಹೀಗೆ ಮುಂದುವರಿಸಿ ಕೊಂಡು ಹೋದರೆ ಈ ರಾಜ್ಯದಲ್ಲಿ ನ್ಯಾಯ, ಧರ್ಮಕ್ಕೆ ಚ್ಯುತಿಬರುತ್ತದೆ ಇದರಿಂದ ನಿಸ್ಪೃಹರಾದವರೂ, ಯೋಗ್ಯರಾದ ಜನರೂ ಬದುಕುವುದೂ ಕಷ್ಟವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನನಗೆ ಗೊತ್ತಿರತಕ್ಕ ಕೆಲವು ನಿದರ್ಶನಗಳನ್ನು ಮಾನ್ಯ ರೆವೆನ್ಯೂ ಸಚಿವರು ಇಷ್ಟಪಡುವುದಾದರೆ ಅವರನ್ನೇ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಜಮೀನಿದ್ದೂ, ತುಂಬಿದ ಸಂಸಾರದ ಮನೆಯಲ್ಲಿ ಮೂವತ್ತು ನಲವತ್ತು ಜನ ಮಕ್ಕಳಿರುವ ಸಂಸಾರಕ್ಕೆ ಐದು ವರ್ಷಗಳಿಂದ ಒಂದು ಕಾಳೂ ಅವರ ಮನೆಗೆ ಬಾರದೇಹೋದರೆ ಅವರು ಹೇಗೆತಾನೆ ಜೀವಿಸ ಬೇಕು ? ಅವರ ಮನೆ,ತುಂಬ ಧಾನ, ಧರ್ಮ ಮಾಡಿದಂತಹ ಮನೆ, ಈ ಕಾನೂನಿನರಕ್ಷಣೆ

ತೆಗೆದು ಕೊಂಡು ಅವರು ಕಿರುಕುಳವನ್ನು ಕೊಡುತ್ತಿದ್ದಾರೆ. ರೈತರಿಂದ ಇಂತಹ ಸಂಸಾರಗಳಿಗೆ ತೊಂದರೆಯಾಗುತ್ತಿದ್ದರೆ ಇದಕ್ಕೆ ಜವಾಬ್ದಾರರು ಯಾರು ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು. ಆದುದರಿಂದ ಈರೀತಿ ರಕ್ಷಣೆಯನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ. ಕೊಡತಕ್ಕ ಒಂದು ಪಾರವನ್ನೋ, ಗುತ್ತಿಗೆಯನ್ನೋ ಪ್ರತಿ ವರ್ಷವೂ ಸರಿಯಾಗಿ ಅವನು ಕೊಡದೇ ಹೋದರೆ. ಅದನ್ನು ತಡೆಗಟ್ಟುವುದು ಹೇಗೆ ? ಇದಕ್ಕೆ ಸಾಕಷ್ಟು ಕಾನೂನನ್ನು ಬೇಗ ಜಾರಿಗೆ ತಂದರೆ ಎಲ್ಲರಿಗೂ ಕ್ಷೇಮವಾಗುತ್ತದೆ. ಇಂಥ ಸಂದರ್ಭದಲ್ಲಿ ಕಡ್ಡಾಯವಾಗಿ ಜಮೀನು ಬಿಟ್ಟು ಹೋಗುವುದಕ್ಕೆ ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ಜನರಿಗೆ ತೊಂದರೆಯುಗುತ್ತದೆ. ಇದಕ್ಕೆ ಗಮನ ಕೊಡಬೇಕೆಂದು ನಾನು ಸೂಚಿಸುತ್ತೇನೆ. ಭೂಸುಧಾರಣೆಯ ಕಾನೂನನ್ನು ಬಹುಬೇಗ ಜಾರಿಗೆ ತರಬೇಕಾಗಿತ್ತು. ನಿಧಾನ ಮಾಡುವುದರಿಂದ ತೊಂದರೆ ಬರುತ್ತದೆ. ನಿಧಾನವಾಗಿರುವುದರಿಂದ ಅನೇಕರು ಯೋಗ್ಯರಾದವರು ಶಪಿಸುತ್ತಿದ್ದಾರೆ. ಈ ಕಾನೂನಿನ ಪ್ರಕಾರ ಪ್ರೊಟೆಕ್ಷನ್ ಕೊಡುವುದಕ್ಕೆ ನಾನು ಒಪ್ಪುವುದು ಸಾಧ್ಯವಿಲ್ಲ, ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

Sri V. S. PATIL (Belgaum-I).—Sir, I must thank the Hon'ble Minister for bringing this Bill with the amendment to clause 3. In proposing as sub-clause (c) of section 7, it appears the Government intends to give some preference to the members of the armed Forces. Hitherto, the personnel serving in the Armed forces were completely neglected. The State Government as well as the Leaders were not giving due consideration to the sacrifices that these people were making for the cause of our country. But now, they have tried to give some preference to these people and for that reason, I must thank the Hon'ble Minister for bringing this particular amendment in this Bill.

Regarding the extention of temorary measures, I should like to say one thing. How long are we to go on with this suspense ? The New State was created on 1-11-1956 and inspite of the period that has elapsed it has become rather difficult or impossible for this Government to have uniform laws in some cases, even though the laws have been passed, the Government find it difficult to enforce them under one pretext or the other. This has created a very anamolous position, because as the Hon'ble Members who just now said, these Bills which prolong the suspense are Bills which are likely to affect the rights of people both landlords as well as tenants. They are not sure as to what will be their fate in future. How long should this period of suspense continue ? There seems to be no limit to it. When the first Bill was introduced, we thought that the Government would take about six months to bring up these laws into force. For the last six years, it looks as they could not cope with it has beome rather strange that we are aked to continue under these suspense laws for an indefinite period. This has definitely proved harmful both to the landlords as well as to the tenants and much more to the nation because the actual cultivation of the land or growing more food or other agricultural product has been affected by this period of suspense. The tenant feels that his period of tenancy is extended only by one year ; and he thinks. "Why should I put all my labour and energy into the land because at the end of March 1964, my land is likely to be taken away by the landlard." The land lord on the other band, feels 'since I am not getting the lands I am at the mercy of the tenant, why should I do any thing for proper cultivation or the grow more food campign or agricultural produces; That is why thelandlord is also neglecting the land. In this process, the nation as

(SRI V. S. PATIL)
a whole suffers by this period of suspense. That is why Sir, I should like to request the Govenment to see that this period of suspense is done away with and make uniform law applicable to the State once for all.

Sri G. VENKATAI GOWDA.—Mr. Speaker Sir, just now the life of another anactment was extended by one more year. The Mysore Tanancy Act, which relates to the agricultural lands. When this has been done, it is but right that the Mysore Tenants Tempory Protection From Eviction Act, 1961, has also to be extended when especially the Government's intention is to safeguard the interests of the tenants. But as my Hon'ble friend Sri. Patil pointed out, the meaning that should be attached to the word 'temporary' would be lost if the life is extended indefinitely. You are aware, Sir, that this Act was adopted in 1961 on the solemn pledge by the Hon'ble Minister in charge who said that within six months, they would see that the Land Reforms Act would be given effect to. No doubt, Government have reserved power to themselves extend the enactment by one year. This also comes to end by the 31st March. They now want to extend the term of the Bill for another year. Sir, the Hon'ble Minister put or forward all sorts of reasons as to why the Government is not in a position to implement the Land Reforms Bill. He said that Article 31 A would come in the way. They said that the President had given his assent to the Bill. Subsequent to this, I believe the Supreme Court has considered all aspects while giving its decision. Yesterday Sir, when His Excellency the Governor delivered his Address, he has been made to say that the assent of the President has been given subject to the amendments to certain sections of the Bill. I fail to see how the President can give assent to the Bill suject to certain amendments to be passed later on by this House. Either the President has to give assent in unqualified terms or withhold assent or he may give a meassage that certain things should be done.

Mr. SPEAKER.—You can reserve that for the Debate on the Address of Thanks.

Sri G. VENKATAI GOWDA.—Why I am submitting this point is this all irrelevant points have been made in the Address of the Governor. It is said in the Address that the President has given his assent to the Bill subject to some amendments that have to be brought before the House later on. I say that after considering all aspects of the case, the President has been pleased to give his assent. And when that has been done, the only course that was open to the Government was to give effect to this particular legislation. They did not give effect to that under the guise of something else. They say there is the Agrarian Bill of Kerala. It was held, it appears, that section 31 A would come in the way. So far as this particular aspect is concerned, I am told that the word 'ESTATE' would not include raitwari land also. Here in our State, we must consider that it is only in South Kanara the raitwari lands exist.

Mr. SPEAKER.—What about Bellary and Kollegal ?

Sri G. VENKATAI GOWDA.—Yes Sir, I do concede. If the Government had had any doubt about this, they could have given effect to this Act in the areas where raitwari system is not in vogue. If the Hon'ble Minister would look to the Madras Cultivating and Tenants Protection Act, he will see that more severe restrictions are imposed on the land lord. I do not see any such restrictions being imposed here. Since the assent of the President has been given, Government could have brought this set into force in only such areas as would be notified by the Government. My submission is that this would amount to disregarding totally the assent of the President. Presuming that something is going to happen, they should not delay giving effect to this Act. I do not know whether the raiyatwari system is vogue in Kerala could be applied with equal force to the raiyatwars system existing here. To my knowledge, article 31 (a) would not apply in our case because it included all sorts of grants, including raiyatwari grant I do not know to what aspect Their Lordships have applied their mind.

Another point is that the very intention with which we have adopted this measure would be defeated. because as every Member knows, not even an inch of land would be available by the time Government takes up the work of implementation of this Act. Also, the relationship of land lords and tenants has been strained much because of the attitude of the Government in not having taken a definite stand with regard to the relationship of the land lord and the tenant.

In this amended Bill, Government seeks to grant exemption to armed forces. Sir, it is said:

> "Lands leased by any member of the Armed Forces of the Union who after the commencement of this Act, has been discharged from service or has been posted to the reserve."

I can understand if it be the case of those who have been discharged. But, why there 'posted to reserve' should be included here ? I do not know what the Hon'ble Minister means by these words 'posted to reserve'. Suppose a person leases his land today and joins the army. After two months, he would be discharged. Does it mean that the land should be resumed though the tenant has not cultivated it even for one year ? What provision has been made for this contingency ? Therefore, my submission is, if it is a genuine case, when the land has been leased before 1st November 1956 and the person is discharged subsequently, then, he should be given the right to resume the land and not otherwise.

Sir, another year has been extended by this amendment. In fact, Government have framed rules also for the Land Reforms Act. When this measure was adopted in this House, a solemn pledge was taken by the then Minister that by 1963 the Act would be implemented. But looking at the amendments for extending the life of this measure, it

(SRI G. VENKATAI GOWDA)

would not be a surprise if the Government came forward with another amending Bill next year to extend the life of this measure by another year. I submit that Government should see that the intention with which this Act has been adopted by this House should be carried out.

Mr. SPEAKER.—I will extend the time for discussion by another 20 minutes, but it would not be possible for me to give chance to everybody. Now Sri Manjaya Shetty will speak for five minutes.

Sri Y. MANJAYA SHETTY (Baindur).—Mr. Speaker, Sir, in supporting the Bill under discussion, I wish to make few observations. No doubt, this Act of 1961 was passed under very special circumstances. When, the Mysore Land Reforms Bill was passed, it was expected that it would be enforced within a period of six months from the date of passing the Bill by this House. But, under circumstances mentioned by the Hon'ble Minister for Revenue, though the Bill received the assent of the President, it could not be enforced or implemented. There are constitutional and other difficulties and it might be necessary to rethink about the provisions of the Act, in view of the changed circumstances. It was assured that the present Bill under discussion, would lost only for a period of six months or so. That was the assurance given by the then Minister for Revenue. The House agree for the passage of this Bill as a temporary measure to that there might not be any large scale eviction of tenants in view of the Land Reforms Act. But, we are unhappy to say that this temporary measure is taking a permanent footing. It has been in force for the last two years and it is likely to be extended by another year. We are doubtful whether the Land Reforms Act would be implemented by March 1964 because the Constitution has got to be amended by the Parliament. I am afraid this may take 2 or 3 years. Naturally, Government would again next year come forwad with another amending Bill to this Act and ask this House to give consent for another year's extension to this temporary measure.

Already on account of this Act, the good relationship that existed between the landlords and the tenant is strained. My own experience is, that tenants who have been paying rent regularly and have been good, have turned out to be bad tenants. On account of the protection given in this Act, tenants who have been paying rent to the landlords regularly, have failed to pay the rent ......

Mr. SPEAKER.—As some more members want to participate in the discussion, I will further extend the period by half an hour.

Sri Y. MANJAYA SHETTY.—I am personally aware that there are tenants who have not paid a single pie of rent since this Act came into force. It is really hard especially to small land-holders who entirely depend upon the income that is due from the land. When the Hon'ble Minister for Revenue visited South Kanara recently in the first week of this month, several representations were made not to extend the Act. Due to various reasons, there is pressure from other areas of the State

to extend this Act. Anyhow, I wish to make one suggestion with regard to this. While agreeing for the extension of the Act, provision should be made for payment of at least one year's rent, that is the current year's rent by every tenant. If that is not done, it would be very difficult for the land-holders to pay not only the usual assessment but also the enhanced surcharge which is now made payable by the land-holder. If the land holders cannot collect rent, how can they pay the usual assessment as well as the enhanced surcharge? If the Government is not inclined to make any provision to that effect, I wish to suggest that the Government take steps to collect at least assessment from the tenants in lieu of the rent they are liable to pay, instead of collecting the same from the land-holders. Some sort of re-thinking is necessary under these circumstances. When the Land Revenue Surcharge Bill came up for discussion in this House, several representations were made to the Hon'ble Chief Minister at least not to extend the life of the Bill under discussion. A sort of promise was held out by the Hon'ble Chief Minister that he would see that this Bill was not extended so as to facilitate the land-holders to collect the rent. But I would request the Hon'ble Chief Minister to just fulfil the promise he had held out and I request the Hon'ble Revenue Minister to re-think over the whole matter and bring such amendments as may be necessary to this Bill, which would enable the land-holders to collect at least the Current year's rent from the tenants on the penalty of being evicted.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಈಗ ಸಭೆಯ ಮುಂದೆ ತಂದಿರತಕ್ಕ ತಿದ್ದುಪಡಿ ಮಸೂದೆಗಳಲ್ಲಿ ಒಂದು ಮುಖ್ಯವಾಗಿ ಯುದ್ಧದಲ್ಲಿ ಭಾಗವಹಿಸಲು ಹೋಗಿರತಕ್ಕವರ ಜಮೀನನ್ನು ಅವರು ವಾಪಸ್ಸು ಬಂದ ಕೂಡಲೇ ಅವರಿಗೆ ಬಿಡಿಸಿ ಕೊಟ್ಟು ಅವರ ಸಂಸಾರಕ್ಕೆ ಅನುಕೂಲ ಮಾಡಬೇಕು ಎಂದು ತಂದಿರುವ ತಿದ್ದುಪಡಿ ಬಹಳ ಸಾಧುವಾಗಿದೆ. ಈ ದಿವಸ ನಮ್ಮ ದೇಶ ಪರಕೀಯರ ಆಕ್ರಮಣಕ್ಕೆ ಸಿಕ್ಕಿ ಒಂದು ಗಂಡಾಂತರ ಪರಿಸ್ಥಿತಿಯಲ್ಲಿರುವಾಗ ಅದನ್ನು ಸಂರಕ್ಷಣೆ ಮಾಡಲು ಸೈನ್ಯದಲ್ಲಿ ಸೇರಿರತಕ್ಕ ಜನರಿಗೂ ಅವರ ಕುಟುಂಬಗಳಿಗೂ ಹೆಚ್ಚಿನ ಸೌಲಭ್ಯ ವನ್ನೊದಗಿಸುವುದು ನಮ್ಮೆಲ್ಲರ ಹಾಗೂ ಸರ್ಕಾರದ ಕರ್ತವ್ಯವಾಗಿದೆ. ಈ ವಿಚಾರವಾಗಿ ಯಾರದೂ ವಿರೋಧವಿರಲಾರದು. ಆದುದರಿಂದ ತಿದ್ದುಪಡಿ ಮಸೂದೆಗೆ ನಾನು ನನ್ನ ಪೂರ್ಣ ಬೆಂಬಲವನ್ನು ಸೂಚಿಸುತ್ತೇನೆ.

ಆದರೆ ಇದರ ಜೊತೆಯಲ್ಲೇ ಇನ್ನೂ ಕೆಲವು ಗೇಣಿದಾರರಿಗೆ ಸಂಬಂಧಪಟ್ಟ ಕೆಲವು ವಿಚಾರ ಗಳನ್ನು ತಂದಿದ್ದಾರೆ. ಈ ವಿಚಾರದಲ್ಲಿ ಈಗಾಗಲೇ ನನ್ನ ಸ್ನೇಹಿತರು ಅನೇಕ ವಿಷಯಗಳನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಆದರೆ ನಮ್ಮ ರೆವಿನ್ಯೂ ಮಂತ್ರಿಗಳು ನಾವು ಮಾಡತಕ್ಕ ವಾದ ಗಳಿಗೆಲ್ಲ ಬಹಳ ಜಾಣ್ಮೆಯಿಂದ ಉತ್ತರ ಕೊಡಬಲ್ಲರು. ಹಿಂದಿನ ಅಧಿವೇಶನದಲ್ಲೂ ಮತ್ತು ಅದರ ಹಿಂದಿನ ಅಧಿವೇಶನದಲ್ಲೂ ಅನೇಕ ಕಾಂಗ್ರೆಸ್ ಸದಸ್ಯರು ಭೂ ಸುಧಾರಣೆ ಶಾಸನವನ್ನು ಹಿಂದಕ್ಕೆ ತಳ್ಳಬಾರದು, ಅದನ್ನು ಕೂಡಲೇ ಜಾರಿಗೆ ತರಬೇಕೆಂದು ಇದೇ ಸಭೆಯಲ್ಲಿ ಒತ್ತಾಯಮಾಡಿ ಪ್ರಾರ್ಥಿಸಿಕೊಂಡಿದ್ದರು. ಆದರೆ ರೆವಿನ್ಯೂ ಮಂತ್ರಿಗಳು ಹಾಗೆ ಜಾರಿಗೆ ತಂದರೆ ಅದರಿಂದ ಮುಂದೆ ಅನೇಕ ಕೋರ್ಟಿನ ತೊಂದರೆಗಳು ಬರಬಹುದು ಎಂದು ಹೇಳುತ್ತಿದ್ದಾರೆ. ಅದಕ್ಕಾಗಿ ನಮ್ಮ ರಾಜ್ಯಾಂಗವನ್ನು ಬದಲಾವಣೆ ಮಾಡಬೇಕು, ಆ ಬದಲಾವಣೆ ಆಗದೆ ಜಾರಿಗೆ ತರಲು ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಹಾಗೆ ರಾಜ್ಯಾಂಗವನ್ನು ಬದಲಾವಣೆ ಮಾಡುವುದಕ್ಕೆ ನಮ್ಮ ಮಂತ್ರಿಗಳೇನು ಪ್ರಯತ್ನಮಾಡಿದ್ದಾರೆ ಎಂದು ನಾನು ಕೇಳುತ್ತೇನೆ? ನನಗೆ ಗೊತ್ತಿರು ವಂತೆ ನಮ್ಮ ಕೆಲವು ಮಂತ್ರಿಗಳು ತಮ್ಮ ಸಂಬಂಧಿಕರಿಗೆ ಭಾರಿ ಹುದ್ದೆಗಳನ್ನು ಕೊಡಿಸಲು ಇಲ್ಲವೇ ಪರ್ಮಿಟ್‌ಗಳನ್ನು ಕೊಡಿಸಲು ಡೆಲ್ಲಿಯ ಯಾತ್ರೆ ನಡೆಸಿರುವ ನಿದರ್ಶನಗಳು ಅನೇಕವು ಇವೆ. ಹಾಗಿರು ವಾಗ ಇಂಥ ಮುಖ್ಯ ವಿಚಾರಕ್ಕೆ ಇಡೀ ದೇಶಕ್ಕೆ ಅತ್ಯಗತ್ಯವಾಗಿ ಬೇಕಾಗಿರುವ ವಿಚಾರವಾಗಿ ನಮ್ಮ ಕಂದಾಯದ ಮಂತ್ರಿಗಳು ಏಕೆ ಡೆಲ್ಲಿಗೆ ಒಂದು ನಿಯೋಗ ಹೋಗಬಾರದು? ಇಲ್ಲಿಯವರೆಗೂ ಏತಕ್ಕೆ ಈ ಕಾರ್ಯವನ್ನು ಮಾಡಲಿಲ್ಲ ಎಂದು ಕೇಳುತ್ತೇನೆ? ಇನ್ನಾದರೂ ನಮ್ಮ ಕಂದಾಯ ಸಚಿವರು

(ಶ್ರೀ ಪಿ. ವೆಂಕಟಗಿರಿಯಪ್ಪ)

ಅವರಿಗೆ ಬೇಕಾದಷ್ಟು ಕೆಲಸಗಳಿದ್ದರೂ ಅದನ್ನು ಹಿಂದಕ್ಕೆ ತಳ್ಳಿ ನಮಗೆ ಕಥೆಗಳನ್ನು ಹೇಳಿ ಲಘುವಾಗಿ ಉತ್ತರ ಕೊಡುವ ಬದಲು ಇಡೀ ರಾಜ್ಯಕ್ಕೇ ಸಂಬಂಧಪಟ್ಟ ಈ ಸಮಸ್ಯೆಗೆ ಅವರು ತಮ್ಮ ಸಂಪೂರ್ಣ ಗಮನ ಕೊಟ್ಟು ಕೆಲಸಮಾಡಬೇಕೆಂದು ಹೇಳುತ್ತೇನೆ. ಕಾನೂನು ಅಡಚಣೆಗಳಿದ್ದರೆ ಅವು ಬಂದಾಗ್ಗೆ ನೋಡಿಕೊಳ್ಳೋಣ. ಈಗಾಗಲೇ ನಮ್ಮ ಸ್ನೇಹಿತರಾದ ಶ್ರೀ ಜಿ. ವಿ. ಗೌಡರು ಹೇಳಿದ ಹಾಗೆ ಆ ಅಡಚಣೆಗಳು ಬರುವುದಕ್ಕೆ ಮುಂಚಿತವಾಗಿಯೇ ಮನೆಗಳಲ್ಲಿ ಅಜ್ಜಿಯು ಮಕ್ಕಳನ್ನು ಹೆದರಿಸಲು, "ಕರಡಿ ಬರುತ್ತದೆ—ಕರಡಿ ಬರುತ್ತದೆ" ಎಂದು ಹೇಳುವಂತೆ ಅಡಚಣೆಗಳು ಬರುವುದಕ್ಕೆ ಮುನ್ನವೇ ಮಂತ್ರಿಗಳೇಕೆ ಗಾಬರಿ ಆಗಬೇಕು ? ಅಂಥ ಸಂದರ್ಭವಿದ್ದರೆ ಆಗ ನೋಡೋಣ. ಆದರೆ ಈಗ ಮಾನ್ಯ ಸಚಿವರು ತಮ್ಮ ಪ್ರಭಾವವನ್ನು ಬೀರಿ ರಾಜ್ಯಾಂಗಕ್ಕೆ ಬೇಗ ತಿದ್ದುಪಡಿ ಮಾಡಿಸಲು ಅವರಿಗೆ ಸಾಧ್ಯವಿದೆ. ಈ ಹಿಂದೆ ನಮ್ಮ ರೆವಿನ್ಯೂ ಮಂತ್ರಿಗಳೂ ಸಹ ರೈತರ ಚಳುವಳಿ ಕಟ್ಟಿದವರ ಪೈಕಿ ಒಬ್ಬರಾಗಿದ್ದಾರೆಂದು ಹೇಳಿಕೊಂಡರು. ಅದೇ ಮನೋಭಾವ ಅವರಲ್ಲಿರುವುದಾದರೆ ಈಗ ಅದನ್ನು ಕೃತಿಯಲ್ಲಿ ತೋರಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri K. S. SURYANARAYANA RAO (Mysore City).—I would like to offer a few remarks.. ......

Mr. SPEAKER.—Does the Hon'ble, Member support or oppose the Bill ?

Sri K. S. SURYANARAYANA RAO—Certainly, I would support it, but subject to a few remaks.

When this Bill was first brought in this House, we were told firmly that it would be a temporary measure. As my friends pointed out, it was a hasty measure. The Land Refroms Bill was then under discussion and it was thought that the very purpose of the reforms would be defeated if tenants were to be evicted and therefore some temporary iterim measure would be necessary to check the process. The land reforms Bill was discussed by this House and then sent to the Upper House. Then there was a lot of delay in getting the assent of the president. Taking advantage of this lapse of time, it was thought that the landlords might take undue advantage and therefore sweeping powers should be conferred on Government to protect the rights of tenants. It was definitely mentioned on the floor of this House that the Act would remain in force for a very, very short period and that immediately after the general elections, if I remember correct, it was stated that the Land Reforms Act would be put into force. We passed the Land Reform Bill prior to the general elections. Even then, as this protection Bills came up before us we assented to it though it was discriminatory in character. Even though the tenant does not pay the landlord any rent, he is protected. To that extent the force were suspended. In 1961, on the date when the Land Reforms Bill was passed many of the tenants who were in arrears were in civil court, or under the process of law and the operation of all such proceedings, was suspended. What about the rent due from 1961 up-to-date? At least if this Bill had lapsed, those powers would have revied to the landlords and they would have collected the rent due, if not evict the tenants, If the Govenment assures them about the recovery of the rents due to the landlord, possibly we may approve this Bill as it is. Therefore I would appeal to the Revenue Minister to consider this matter in all its aspects. Of

course, he is a champion of the ryots. I do not want to deny him that credit. But let him be charitable to the landlord who holds small pieces of land. In doing good to a person, let him not harm others. It is not as if this is a case of Paul being robbed so that Peter may be paid. Let the State Government hold the balance of equity even. I would appeal to the Minister to consider sympathetically this equitable claim of the landlord, who may not be a big landlord. If the lands belong to a big landlord owning hundreds of acres, we may not bother about him but the man who holds 1 or 2 acres or the minimum we have allowed in the Land Reforms Bill?

There is another aspect. It is not as if we have put the president in an embarrassing situation. Are we to understand that the President not knowing the legal implications gave assent to it or is it that the president knowing that there might not be any difficulty, gave his assent? if the Land Reforms Act is defective in its application to particular areas or regions of the State, at least this House is competent to make the Act operative in such areas of the State where it could be safely and legally be made operative. If necessary, the Act could be suitably amended. The Emergency has come now and there are difficulties in the way of early amendment of Article 31 (A). Why not this House pass the amendments suggested by the President and implement the Act to the extent possible? If there is any difficulty in this respect also, atleast let them make an amendment to this Bill, which seeks to protect the tenats for all times to come,. Till 1964, the tenant need not make any payment, nor does he pay nor vacate the land. Atleast if the Government gives the right to the landlord to execute such of the decrees that are pending for arrears of rent, it would help the situation. I request the Hon. Minister to bestow some thought in this matter. Even in this Bill we can make an amendment given the right to the landlord so far as arrears of rent are concerned. An amendment to that effect is most desirable and I hope the Minister will consider it sympathetically.

† Sri SANJEEVANATH AIKALA (Surathkal).—Sir, when this was being discussed last year, I correctly foretold that the Hon. Revenue Minister would come forward again with a request for renewal of the life of this Bill. What I told then has come true now. The Hon. Minister is back again with a couple of Bill seeking extension of time.

Sir, much has been said about the two Bills. The Hon. Member from Coondapur spoke about the grave situation existing in the district of South Kanara. The relation between the tenants and the landlords is strained greatly. The one complaint against the other and there is a war of nervous. The tenants say that the landlords are trying all sorts of methods to get them evicted, whereas the landlords say that they cannot get the rents due because of the extraordinary provisions of this Bill. This sort of situation is doing great damage to grow more food and food production is suffering. Neither the tenants are willing to cultivate nor the landlords are prepared to recover lands to their possession because of the difficulties in the law. Hundreds of acres remain uncultivated.

(SRI SANJEEVANATH AIKALA)

Sir, there was ample time even during the last session for the Government to have pressed the parliament to get an amendment to Article 31 A. But there was no willingness on the part of Government. They had 6 months before the Emergency, from April to September 1962. But the Government has taken things lethegically and does not appear to be serious about these matters. It finds difficult to extricate itself from the mess which is its own creation. It is not the fault of the defective laws but it is the fault of Government which takes things lightly. It has no intention of doing justice to tenats and the landlords. I do not know how long the Emergency will continue. We should not be surprised if the Revenue Minister comes to us again in 1964. He might plead that in view of the continuation of the Emergency, Parliament could not amend the Constitution.

I join issue with my friends who pleaded that the Land Reforms Act should be implemented early, atleast in areas where there would be no legal impediments. In any case it is not proper to keep the people in suspense and it is highly desirable and necessary that the provisions of the Act are brought into effect immediately.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಹಿಂದೆ ಭೂ ಸುಧಾರಣೆಯನ್ನು ಜಾರಿಗೆ ಕೊಟ್ಟಿದ್ದರೆ ಅದರಲ್ಲಿರುವಂತೆ ಗೇಣೀದಾರರುಗಳಿಂದ ಜಮೀನುಗಳನ್ನು ಬಿಡಿಸಿಕೊಳ್ಳಬೇಕಾದರೆ ಕೆಲವು ಷರತ್ತುಗಳು ಅನುಕೂಲವಾಗಿದ್ದವು ಅದರಂತೆ ಜಮೀನುದಾರರು ಗೇಣೀದಾರರುಗಳನ್ನು ಸಾಮೂಹಿಕವಾಗಿ ಬಿಡಿಸುವುದು, ಜಮೀನಿಂದ ಸ್ಥಳ ಪಲ್ಲಟ ಮಾಡಿಸುತ್ತಿದ್ದರು ಎನ್ನುವ ವಿಷಯ ಗೊತ್ತಾಗಿದೆ. ಈ ರೈತರುಗಳ ಹಿತವನ್ನು ಕಾಪಾಡಬೇಕೆನ್ನುವ ಉದ್ದೇಶದಿಂದ ಈ ಕಾನೂನನ್ನು ಜಾರಿಗೆ ತಂದರು. ಆದರೂ ಕೂಡ ಅನೇಕ ಕಡೆ ಕಾನೂನು ಜಾರಿಗೆ ಬಂದಿದ್ದರೂ ನೂರಾರು ಜನರನ್ನು ಎವಿಕ್ಟ್ ಮಾಡಿದ್ದಾರೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಮಾನ್ಯ ಸದಸ್ಯರು ಬಿಲ್ಲನ್ನು ಸರಿಯಾಗಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನಮ್ಮ ಮಾನ್ಯ ಮಿತ್ರರು ಜಮೀನುದಾರರ ಪರವಾಗಿ ಅವರ ಹಿತರಕ್ಷಣೆಯನ್ನು ಕಾಪಾಡುವುದಕ್ಕಾಗಿ ಬಹಳ ಆಸಕ್ತಿ ವಹಿಸಿ ವಾದಮಾಡಿ ಹೇಳಿದರು. Chester Bowles ಎನ್ನುವವರು ಭಾರತಕ್ಕೆ ಬಂದು ಇಲ್ಲಿನ ಪರಿಸ್ಥಿತಿಯನ್ನು ನೋಡಿ ಒಂದು ವರದಿ ಕೊಟ್ಟಿದ್ದಾರೆ, ಅದರಲ್ಲೇ ಇದರ ವಿವರಗಳನ್ನೆಲ್ಲಾ ಹೇಳಿದ್ದಾರೆ. ಅದರಲ್ಲಿ ರೈತರಿಗೆ ಹೆಚ್ಚಿನ ಅನುಕೂಲಗಳನ್ನು ಮಾಡಬೇಕಾದರೆ ಟೆನೆನ್ಸಿ ಕಾನೂನನ್ನು ಜಾರಿಗೆ ತರಬೇಕು, ಪ್ರಗತಿದಾಯಕವಾದ ಕಾನೂನುಗಳನ್ನು ಜಾರಿಗೆ ಕೊಡಬೇಕು ಮತ್ತು ಬಲವಾದ ಒಂದು ಶಾಸನವನ್ನು ಮಾಡಬೇಕು ಎಂದೂ ಆ ರಿಪೋರ್ಟಿನಲ್ಲಿ ಬರೆದಿದ್ದಾರೆ. ಅಲ್ಲದೆ ಈ ಶಾಸನ ಸಭೆಯಲ್ಲಿ ಜಮೀನುದಾರರ ಪರವಾಗಿ ಆಸಕ್ತಿ ವಹಿಸಿ ಹೆಚ್ಚಾಗಿ ಅವರ ಪರವಾಗಿಯೇ ಮಾತನಾಡಿದ್ದಾರೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಲ್ಯಾಂಡುಲಾರ್ಡ್‌ಗಳ ಬಗ್ಗೆ ಯಾರು ಆಸಕ್ತಿ ವಹಿಸಿದರು. I only request him to see the principle of the Bill we are discussing.

Sri G. A. THIMMAPPA GOWDA.—I am very sorry, Sir, ನಾನು ಹೇಳಿದುದೇನೆಂದರೆ, ಚೆಸ್ಟರ್ ಬೌಲ್ಸ್ ರಿಪೋರ್ಟಿನಲ್ಲೇ ಇದೆಲ್ಲವನ್ನೂ ಹೇಳಿದ್ದಾರೆ.

Sri C. J. MUCKANNAPPA.—Is he pleading on behalf of one Swatantra Party ?

ಶ್ರೀ ಜಿ. ಎ. ತಿಮ್ಮಪ್ಪಗೌಡ.— ರೈತರುಗಳ ಪರವಾಗಿ ಎಂದು ಹೇಳುತ್ತ ಈ ದೇಶದಲ್ಲಿ ಪ್ರಗತಿದಾಯಕವಾದ ಕಾನೂನಿಗೂ ಅಡ್ಡಿ ಬರುತ್ತಿದ್ದಾರೆ. ಅದಕ್ಕಾಗಿ ನಾನು ಇಲ್ಲಿ ಹೇಳುತ್ತಿದ್ದೇನೆ, ಕೆಲವರು ಗುತ್ತಿಗೆಯನ್ನು ನಾಲ್ಕೈದು ವರ್ಷಗಳ ಕಾಲ ಜಮೀನುದಾರರುಗಳಿಗೆ ಕೊಡದೇ ತೊಂದರೆ ಕೊಡುತ್ತಿದ್ದಾರೆ ಎಂದು ಹೇಳಿದರು. ಹಾಗೆ ಗುತ್ತಿಗೆ ಕೊಡದೆ ಇರುವವರಿಗೆ Mysore

Tenancy Act Section 30 Procedure for recovery of rent ಎನ್ನುವುದರಲ್ಲಿ ವಿವರವಾಗಿ ಹೇಳಲಾಗಿದೆ. ಅದರಂತೆ ಗುತ್ತಿಗೆಯನ್ನು ಕೊಡದಿದ್ದ ಪಕ್ಷದಲ್ಲಿ ಅದನ್ನು ವಸೂಲುಮಾಡಲು ಕೆಲವು ಪ್ರಾಂತಗಳಲ್ಲಿ ಸಿವಿಲ್ಲು ಕೋರ್ಟುಗಳಿವೆ, ನಮ್ಮಲ್ಲಿ ಟೆನೆನ್ಸಿ ಕೋರ್ಟುಗಳಿವೆ. ಅಲ್ಲಿ ದಾವಾ ಹಾಕಿ ಗುತ್ತಿಗೆಯನ್ನು ವಸೂಲು ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಅದರಲ್ಲಿ ಹೀಗಿದೆ "Not withstanding anything contained in any agreement in any Law, proceedings for a landlord for recovery of rent payable to him by a tenant, shall be by means of an application to the Amildar etc., ಹೀಗೆ ಗುತ್ತಿಗೆಯನ್ನು ಕೊಡದೇ ಇದ್ದ ಪಕ್ಷದಲ್ಲಿ ಕೋರ್ಟಿಗೆ ಹೋಗಿ ಅಲ್ಲಿ ವಸೂಲುಮಾಡಿ ಕೊಳ್ಳಬಹುದು.

ಶ್ರೀ ಜಿ. ವೆಂಕಟೇಗೌಡ.—ಅದನ್ನೂ ಕೂಡ ಮಾಡಬಾರದು ಎಂದು 1961ರಲ್ಲೇ ಒಂದು ಆಕ್ಟನ್ನು ಪಾಸುಮಾಡಿದ್ದೇವೆ. The Mysore Tenants Act, 1961, prevent, even such a course to be taken.

Mr. SPEAKER.—I strongly object to anybody misleading another on the floor of the House.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಎವಿಕ್ಷನ್ನನ್ನು ಪ್ರಿವೆಂಟು ಮಾಡುವುದಕ್ಕೆ ಈ ಕಾನೂನು ಇದೆ. ಗುತ್ತಿಗೆಯನ್ನು ಬೇರೆಯವರಿಂದ ವಸೂಲು ಮಾಡುವುದಕ್ಕೆ ಈ ಕಾನೂನು ಬರುವುದಿಲ್ಲ ಎನ್ನುವುದನ್ನು ನಮ್ಮ ಸ್ನೇಹಿತರು ತಿಳಿದುಕೊಳ್ಳಬೇಕು. ಈಗಾಗಲೇ ಅನೇಕ ಕೋರ್ಟುಗಳಲ್ಲಿ ಬಹಳ ಕೇಸುಗಳಾಗಿ ದಾವಾ ಆಗಿ ಡಿಕ್ರಿಗಳನ್ನು ತೆಗೆದುಕೊಂಡಿದ್ದಾರೆ. ಅದರಂತೆ ರೈತರಿಂದ ಬರುವ ಬಾಕಿಯನ್ನು ವಸೂಲು ಮಾಡಿರುವ ನೂರಾರು ನಿದರ್ಶನಗಳು ನಮ್ಮ ಸ್ನೇಹಿತರ ಗಮನಕ್ಕೂ ಬಂದಿರಬಹುದು. ಆದರೆ ನಮ್ಮ ಸ್ನೇಹಿತರು ಒಂದು ಕಡೆ ಕರುಣೆ ತೋರಿಸುತ್ತಾರೆ. ಬೇರೆ ಯಾರೂ ಗೇಣಿಗೆ ಕೊಟ್ಟಿರುವ ರೈತ ಗೇಣಿಯನ್ನು ಕೊಡದೆ ಪಾಳುಬಿಟ್ಟು ಸರಿಯಾದ ರೀತಿಯಲ್ಲಿ ವ್ಯವಸಾಯ ಮಾಡದೇ ಪೈರನ್ನು ಬೆಳೆಯಿಸದೇ ಇಲ್ಲ. ಅಲ್ಲದೆ ಗುತ್ತಿಗೆಯನ್ನು ನೂರಕ್ಕೆ 50ರಷ್ಟು ಜನ, 75ರಷ್ಟು ಜನ ವಸೂಲಮಾಡಿ ಕೊಳ್ಳುತ್ತಿದ್ದಾರೆ. ಆದರೆ ಗುತ್ತಿಗೆಯನ್ನು ಕೊಡದೇ ಇದ್ದರೆ ಕೋರ್ಟುಗಳಿಗೆ ಹೋಗಿ ವಸೂಲುಮಾಡುವ ಅವಕಾಶ ಇದೆ. ಆದ್ದರಿಂದ ಭೂ ಸುಧಾರಣೆ ಬರುವ ವರೆಗೆ ಈಗ ಸರಕಾರ ತಂದಿರುವ ಈ ಕಾನೂನು ಅಗತ್ಯವಾಗಿದೆ ಎಂದು ನಾನು ಹೇಳುತ್ತೇನೆ.

Mr. SPEAKER.—The half-an-hour time which I extended, is likely to be over in two minutes. I extend it by another 20 minutes.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರೇ ಸರಕಾರದ ಬಗ್ಗೆ ಹೆಚ್ಚಾಗಿ ಮಾತನಾಡುತ್ತಾರೆಂದು ಕೊಂಡಿದ್ದೆ. ಅವರು ಹಾಗೆ ಹೇಳುವುದು ಸ್ವಾಭಾವಿಕ ಎಂದುಕೊಂಡಿದ್ದೆ. ಆದರೆ ಈಗ ನೋಡಿದೆ, ಈ ಕಡೆ 50 ಜನ ಮತ್ತು ಆ ಕಡೆಯೂ 50 ಜನ ಇದ್ದಾರೆನ್ನುವುದು ಎಂದರೆ ಶೇಕಡ ಐವತ್ತರಷ್ಟಿದ್ದಾರೆನ್ನುವುದನ್ನು ಒಪ್ಪಿಕೊಂಡ ಹಾಗಾಯಿತು. ಮಾನ್ಯ ಮಂತ್ರಿಗಳು ಈ ಹಿಂದಿನ ಬಿಲ್ಲನಂತೆಯೇ ಇದನ್ನು ತಂದಿದ್ದೇವೆ ಎಂದು ಹೇಳಿದರು, ಆದರೆ ಈ ಹಿಂದೆ ತಂದ ಅಮೆಂಡಿಗ್ ಬಿಲ್ಲು ಪಾಸಾದ ಮೇಲೆ ಈ ಬಿಲ್ಲನ್ನು ತರದೇ ಇದ್ದಿದ್ದರೆ ಉತ್ತಮವಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. ಅವರಿಗೆ ರಕ್ಷಣೆ ಕೊಡಬೇಕು, ಭೂಮಿಯಿಲ್ಲದವರಿಗೆ ಭೂಮಿಯನ್ನು ಕೊಡಬೇಕು ಎಂದು ಪುನಃ ಇದರಲ್ಲಿ ರಕ್ಷಣೆ ಕೊಡಲು ಈ ಬಿಲ್ಲನ್ನು ತಂದಿದ್ದಾರೆ. ಸರಕಾರದಲ್ಲಿ Might is right ಎನ್ನುವಂತೆ ಅಟಕ್ಕೋಸ್ಕರ ಈ ರಕ್ಷಣೆ ಬೇಕಾಗಿದೆ. ಅವನಿಗೆ ಎಲ್ಲಿ ಭೂಮಿ ಇದೆ, ಎಲ್ಲಿ ಕಾಡಿದೆ, ಎಲ್ಲಿ ಗುಡ್ಡವಿದೆ, ಎಲ್ಲಿ ಬೆಟ್ಟ ಇದೆ, ಎಲ್ಲಿ ಗುಡ್ಡಗಾಡಿದೆ ಎನ್ನುವುದನ್ನೆಲ್ಲಾ ನೋಡಿಕೊಳ್ಳುವುದು ಕಷ್ಟ, ಇದನ್ನು ಬಿಟ್ಟುಬಿಡಿ. ಅವುಗಳನ್ನುಮಾಡಿ ಕೊಳ್ಳಲಿ ಎಂದು ಹೇಳುವುದನ್ನು ನೋಡಿದರೆ ಒಂದಕ್ಕೊಂದು ಆಭಾಸವಾಗಿ ಕಾಣುತ್ತದೆ.

ಭೂಸುಧಾರಣೆಯ ಕಾನೂನು ಆದಷ್ಟು ಜಾಗ್ರತೆ ಜಾರಿಗೆ ಬರಬೇಕು. ಸಾಗುವಳಿ ಮಾಡುವುದಕ್ಕೆ ರೈತನಿಗೆ ಜಮೀನು ದೊರೆಯುವ ಹಾಗೆ ಆಗಬೇಕು. ಈ ರೀತಿ ತಿದ್ದುಪಡಿ ಮಸೂದೆ ತಂದಿರುವುದು ಬಹಳ ಅನ್ಯಾಯವಾದುದು. ಏಕೆಂದರೆ ಇದರ ದುರುಪಯೋಗವಾಗುತ್ತದೆ. ಪ್ರಜೆಗಳ ಉದ್ಧಾರಮಾಡುವ ಧ್ಯೇಯವಿಟ್ಟುಕೊಂಡಿರುವ ಸರಕಾರ ಈ ರೀತಿ ಮಾಡುವುದು ಸರಿಯಲ್ಲ. ಮನಸ್ಸಿಗೆ ಬಂದ ಹಾಗೆ ಮಾಡಬಾರದು ಎಂದು ಹೇಳುವಂತಾಗುತ್ತದೆ. ರೈತನಿಗೆ ಜಮೀನು ಕೊಡುವ ಧ್ಯೇಯವೇನೋ ಹೇಳುವುದಕ್ಕೆ ಇದೆ. ಆದರೆ ನಿಜವಾಗಿಯೂ ಹಳ್ಳಿಗಳಲ್ಲಿ ಭೂಮಿಯು ಪುಂಡುಪೋಕರಿಗಳ ಕೈಗೆ ಹೋಗಿದೆ. ಈ ರೀತಿಯಾದರೆ ರೈತನಿಗೆ ಜಮೀನು ಹೇಗೆ ದೊರೆಯುತ್ತದೆ? ಆದುದರಿಂದ ಇಂಥಾದ್ದಕ್ಕೆ ಅವಕಾಶಮಾಡಿ ಕೊಡದೆ, ಆದಷ್ಟು ಜಾಗ್ರತೆ ಭೂಸುಧಾರಣೆ ಕಾನೂನನ್ನು ಜಾರಿಗೆ ತರಬೇಕು. ರೈತನಿಗೆ ರಕ್ಷಣೆ ಕೊಡಬೇಕಾದುದು ಸರಕಾರದ ಆದ್ಯಕರ್ತವ್ಯ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ರೈತನನ್ನು ಸಂಕಟಕ್ಕೆ ಗುರಿಮಾಡುವುದು ಸರಿಯಲ್ಲ. ರೈತನಿಗೆ ರಕ್ಷಣೆ ಕೊಡುವುದಕ್ಕೆ ಸರಿಯಾದ ಮಾರ್ಗ ಅನುಸರಿಸಿ ಯೋಗ್ಯಕ್ರಮ ಕೈಕೊಳ್ಳಬೇಕು. ಇದನ್ನು ಲಘುವಾಗಿ ಭಾವಿಸಬಾರದು ಎಂದು ವಿನಯದಿಂದ ಸರಕಾರಕ್ಕೆ ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ನಾಲ್ಕು ಮಾತು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಮೈಸೂರು ರಾಜ್ಯದ ಗೇಣಿದಾರರನ್ನು ಜಮೀನಿನಿಂದ ಹೊರಹಾಕದಂತೆ ತಾತ್ಕಾಲಿಕ ರಕ್ಷಣೆಯನ್ನು ಕೊಡುವುದಕ್ಕೆ ಸಂಬಂಧಪಟ್ಟ 1961ನೇ ಇಸವಿಯ ಕಾನೂನನ್ನು ಪುನಃ ಒಂದು ವರ್ಷದವರೆಗೆ ಮುಂದುವರಿಸಬೇಕು ಎಂದು ತಿದ್ದುಪಡಿ ಮಸೂದೆ ತಂದಿದ್ದೀರಿ. ಈಗ ತಾನೆ ಈ ಸಭೆಯಲ್ಲಿ ಅಂಗೀಕರಿಸಿದ ಮಸೂದೆಗೂ ಇದಕ್ಕೂ ಹೆಚ್ಚಿನ ಸಂಬಂಧವಿದೆ. ಆ ಮಸೂದೆಯಮೇಲೆ ಮಾಡಿದ ನನ್ನ ಭಾಷಣವನ್ನು ಈಗ ಈ ಮಸೂದೆಯ ಬಗ್ಗೆ ಮುಂದುವರಿಸುತ್ತೇನೆ. ''ಅನೇಕ ಕಡೆ ಗೇಣಿ ಸರಿಯಾಗಿ ಪಾವತಿಯಾಗುತ್ತಿಲ್ಲ ಅದನ್ನು ಪಡೆಯುವುದು ಬಹಳ ಕಷ್ಟವಾಗಿದೆ. ಜಮೀನು ಇದ್ದರೂ ಸಹ ಉಪವಾಸ ಬೀಳುವ ಪರಿಸ್ಥಿತಿ ಬಂದಿದೆ. ಗೇಣಿ ವಸೂಲಿ ಆಗುತ್ತಾ ಇಲ್ಲ'' ಎಂದು ಒಂದು ಮಾತನ್ನು ಈ ಮೊದಲು ಮಾತನಾಡಿದ ಸದಸ್ಯರು ಹೇಳಿದರು. ಆದರೆ ಕೆಲವು ಸಂದರ್ಭಗಳಲ್ಲಿ ಮೈನರ್ ಮತ್ತು ವಿಧವೆಯರ ಜಮೀನುಗಳ ವಿಚಾರದಲ್ಲಿ ಅವರಿಗೆ ಶಕ್ತಿಯಿಲ್ಲದೇ ಇರುವುದರಿಂದ ಗೇಣಿ ಕೊಡದೇ ಇರತಕ್ಕಂಥ ಸಂಗತಿಗಳನ್ನು ನಾನು ಕೇಳಿದ್ದೇನೆ. ಇದು ಸಾರ್ವತ್ರಿಕವಾಗಿ ನಡೆಯುತ್ತಿದೆ ಎಂದು ನಾನು ಒಪ್ಪಲಾರೆ. ಈಗ ಇರತಕ್ಕ ಕಾನೂನು ಗೇಣಿದಾರನಿಗೆ ಏನು ರಕ್ಷಣೆ ಕೊಡುತ್ತದೆ? ಮಾನ್ಯ ಮಂತ್ರಿಗಳಿಗೆ ನಾನು ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪೂರ್ತಿಯಾಗಿ ಸಮಗ್ರವಾದ ಭೂಸುಧಾರಣೆಯ ಕಾನೂನನ್ನು ಒಟ್ಟಿಗೆ ಕರ್ನಾಟಕಕ್ಕೆಲ್ಲಾ ಅನ್ವಯಿಸುವ ಹಾಗೆ ತಕ್ಷಣ ಜಾರಿಗೆ ತರಬೇಕು. ಉಳಿದ ಕಡೆ ಸ್ವಲ್ಪ ಅಡಚಣೆಗಳು ಇರಬಹುದು. ಆದರೆ ಹಳೇ ಮೈಸೂರಿನ ವಿಚಾರದಲ್ಲಿ ಇಲ್ಲ. ಆದರೂ ಸಹ ಜಾರಿಗೆ ತರುವುದನ್ನು ನಿಧಾನಮಾಡಲಾಗುತ್ತಿದೆ. ಈ ರೀತಿ ಮುಂದೆ ಹಾಕುತ್ತಾ ಹೋಗುವುದು, ಸಂರಕ್ಷಣೆ ಕೊಡುವುದು ಬಹಳ ತಪ್ಪು. ಒಕ್ಕಲೆಬ್ಬಿಸುವುದು ಅವ್ಯಾಹತವಾಗಿ ನಡದೇ ಇದೆ ಎನ್ನುವುದನ್ನು ಸರಕಾರದ ಗಮನಕ್ಕೆ ತರುತ್ತೇನೆ. ಗೇಣಿದಾರರಿಗೆ ರಕ್ಷಣೆ ದೊರೆಯುತ್ತಿಲ್ಲ. ಇದನ್ನು ತಾವು ಗಮನದಲ್ಲಿಡಬೇಕು. ಕಂದಾಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ತಾವೇ ರೈತರ ಚಳವಳಿ ಮಾಡಿ ಸುಧಾರಣೆ ತಂದವರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅವರೇ ಹಾಗೆ ಹೇಳಿ ಕೊಳ್ಳಲಿ. ಅವರಿಗೆ ಆ ಕೀರ್ತಿ ಸಲ್ಲಲಿ. ಅವರು ಆದಿಮೂರ್ತಿಯಾಗಿರಲಿ. ಆದರೆ ಅವರಿಗೆ ಸ್ವಲ್ಪ ವಿವೇಚನೆ ಇರಬೇಡವೆ? ಇನಾಮ್ ಅಬಾಲಿಷನ್ ಕಾನೂನು ಬಂದು ಎಷ್ಟು ವರ್ಷ ವಾಯಿತು? ಆದರೆ ಸರಕಾರ ಎಷ್ಟು ಹಳ್ಳಿಗಳ ಸರ್ವೆಸೆಟಲ್‌ಮೆಂಟ್ ಮಾಡಿದ್ದಾರೆ ಎನ್ನುವುದಕ್ಕೆ ಉತ್ತರ ಕೊಡಲಿ. ಇದಕ್ಕೆ ಸಂಬಂಧಪಟ್ಟ ಹಾಗೆ ಎಷ್ಟು ರಿಟ್ ಅರ್ಜಿಗಳು ಎಷ್ಟು ವರ್ಷಗಳಿಂದ ಹೈಕೋರ್ಟಿನಲ್ಲಿವೆ ಎನ್ನುವುದನ್ನು ವಿಚಾರಮಾಡಬೇಕು.

5 P.M.

ಹೇಳುವುದಕ್ಕೂ ಕೃತಿಗೂ ಏನಾದರೂ ಸಂಬಂಧವಿರಬೇಕು. ಆದ್ದರಿಂದ ಇಲ್ಲಿ ನಾನು ಮುಖ್ಯವಾಗಿ ಹೇಳುವುದು, ಈ ತಾತ್ಕಾಲಿಕವಾಗಿ ರಕ್ಷಣೆ ಕೊಡುವ ಮಸೂದೆಯನ್ನು ತಾವು ಮುಂದುವರಿಸಿಕೊಂಡು ಹೋದರೆ ದೇಶಕ್ಕೆ ಅನ್ಯಾಯವಾಗುತ್ತದೆ, ಪರಿಸ್ಥಿತಿ ಉಲ್ಬಣವಾಗುತ್ತದೆ, ಅದಕ್ಕೆ ಪರಿಹಾರ ನೀಡುವುದು ಬಹಳ ಕಷ್ಟ. ಭೂಸುಧಾರಣೆಯ ಬಗ್ಗೆ ಶಾಂತಃ ಯೋಚನೆ ಮಾಡಬೇಕು. ನನಗೆ ಅರ್ಥವಾಗುತ್ತದೆ ತಮ್ಮ ಪಕ್ಷದಲ್ಲಿಯೇ, ಅದಕ್ಕೆ ಪ್ರಬಲ ವಿರೋಧವಿದೆ, ಜಮೀನುದಾರರನ್ನು ಉಳಿಸಬೇಕೆನ್ನುವವರು ಇದ್ದಾರೆ. ಮಧ್ಯವರ್ತಿಗಳು ಇರಬಾರದೆಂದು ಒಪ್ಪಿಕೊಂಡಿದ್ದರೂ, ತಮ್ಮ ಪಕ್ಷದಲ್ಲಿ ಮಧ್ಯವರ್ತಿಗಳು ಇರಬೇಕೆನ್ನುವವರು ಇದ್ದಾರೆ, ಗೇಣಿಯನ್ನು ಸಲೀಸಾಗಿ ಮನೆಗೆ ಹೊತ್ತುಕೊಂಡು ಬಂದು ಮುಡಿಕಟ್ಟಿ ಕೊಟ್ಟು ಹೋಗಬೇಕೆಂದು ಹೇಳುತ್ತಾರೆ. ಅವರು ಹಳೇ ಒಬೀರಾಯನ ಕಾಲದ ಪದ್ಧತಿ ನಡೆಯಬೇಕೆಂದು ಭಾವಿಸಿದ್ದಾರೆ. ಆ ಪದ್ಧತಿ ಕಾರಣಾಂತರದಿಂದ ಉಳಿದುಕೊಂಡು ಬಂದಿದೆ. ಎಷ್ಟೇ ರಕ್ಷಣೆ ಕೊಟ್ಟರೂ ಅದು ಎಂದೆಂದಿಗೂ ಉಳಿಯತಕ್ಕಂಥದಲ್ಲ. ಜಮೀನುದಾರರು ಭಿಕ್ಷೆ ಬೇಡುವಂತೆ ಆಗಬೇಕು. ಅವರು ನಾಶವಾಗಬೇಕು. ಅವರ ಸಂಸಾರಗಳು ಹಾಳಾಗಬೇಕು ಎಂಬುದು ನಮ್ಮ ಉದ್ದೇಶವಲ್ಲ. ಅವರಿಗಿಂತ ಬಲಹೀನರಾಗಿರತಕ್ಕಂಥ ದುಡಿದು ತಿನ್ನತಕ್ಕಂಥ ರೈತರು ಮತ್ತು ದೇಶಕ್ಕಾಗಿ ಬೆಳೆಯನ್ನು ಶ್ರಮಪಟ್ಟು ಬೆಳೆಯತಕ್ಕಂಥ ರೈತರಿಗೆ ರಕ್ಷಣೆ ಕೊಡಬೇಕು. ಅವರಿಗೆ ಭೂಮಿ ಕೊಡಬೇಕು, ಆ ಕೆಲಸ ಸರ್ಕಾರ ಮಾಡಬೇಕು. ಆದರೆ

ನಿಮಗಿಂತ ಹೆಚ್ಚಿನ ಉತ್ಸಾಹ ನಮಗಿದೆಯೆಂದು ತಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತೀರ. ಉತ್ಸಾಹವನ್ನು ಬರೀ ಮಾತಿನಲ್ಲಿ ತೋರಿಸದೆ, ಕೃತಿಯಲ್ಲಿ ಮಾಡಿ ಭೂಸಮಸ್ಯೆಯನ್ನು ಪರಿಹಾರ ಮಾಡಬೇಕು. ನಾನು ಹತ್ತಾರು ಸಾವಿರ ಎಕರೆ, 20 ಸಾವಿರ ಎಕರೆ ಭೂದಾನ ಮಾಡಿದ್ದೇನೆಂದು ಹೇಳಿದರೆ ಪ್ರಯೋಜನವಿಲ್ಲ. ಹಿಂದಿನ ಕಂದಾಯ ಮಂತ್ರಿಗಳೂ ಅದೇ ರೀತಿ ಅನೇಕ ಸಲ ಹೇಳಿದ್ದಾರೆ. ''ನಾನು ಇಷ್ಟು ಲಕ್ಷ ಎಕರೆ ಹಂಚಿದೆ'' ಯೆಂದು ಹೇಳುತ್ತಿದ್ದರು. ಪ್ರವಾಸಮಾಡುತ್ತಾರೆ ಮತ್ತು ಹಂಚುತ್ತಾರೆ. ಆದರೆ ಹಂಚುವುದರಲ್ಲಿ ಜನಗಳ ಕೈಸೇರುವುದು ಎಷ್ಟು ? ಪೋಡೀ (Phodi) ಮಾಡಿ ಕೊಡುವುದೆಷ್ಟು? ಅಳತೆಯಾಗಿ ಸಾಗುವಳಿ ಚೀಟಿ ಕೊಟ್ಟಿದೆಯೇ ? ಒಂದು ಎಕರೆಯನ್ನೂ ಕೊಡದಿರುವ ನೂರಾರು ಉದಾಹರಣೆಗಳನ್ನು ಕೊಡಬಲ್ಲೆ ಮತ್ತು ತೋರಿಸಬಲ್ಲೆ. ಈ ಮಾತಿನಿಂದ ಏನು ಪ್ರಯೋಜನ ? ನಿಸ್ಪೃಹತೆಯಿಂದ ಕೆಲಸ ಮಾಡಬೇಕು. ಕಾರ್ಯತಃ ಪ್ರಯೋಜನವಾಗಬೇಕು. ಕಾನೂನು ನೀವು ಮಾಡಿದರೆ ಅದರ ಪ್ರಯೋಜನ ಜನರಿಗೆ ಆಗಲೇ ಸಿಕ್ಕಬೇಕು. ಇಲ್ಲದೆ ಹೋದರೆ ಕಾನೂನು ಮಾಡಿದ್ದೇವೆಂಬ ಬರೀ ಸಮಾಧಾನ ನಿಮಗೆ ಇರುತ್ತದೆ. ಅದು ದೇಶದ ಮುಂದೆ ಹೇಳಿಕೊಳ್ಳುವುದಕ್ಕಾಗುತ್ತದೆ. ಇದರಿಂದ ಪ್ರಯೋಜನವಾಗುವುದಿಲ್ಲ. ನೀವು ಈ ತರಹ ಮುಂದುವರಿಸಿಕೊಂಡು ಹೋದರೆ ದೇಶದ ಜನತೆ ಬಹುಶಃ ಕೇಳಲಾರರು ಎಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ತಾವು ರಕ್ಷಣೆ ಕೊಡುವ ಕಾನೂನು ಏನು ತಂದಿದ್ದೀರೋ ಅದರಿಂದ ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವುದರ ಜೊತೆಗೆ, ಆಮೂಲಾಗ್ರವಾಗಿ ಭೂವ್ಯವಸ್ಥೆಯಲ್ಲಿ ಪರಿವರ್ತನೆಯಾಗಬೇಕು. ಸುಧಾರಣೆ ಕಾನೂನು ತಂದು ಹೆಚ್ಚು ಪ್ರಯೋಜನ ಮಾಡಬೇಕೆಂದು ಸರ್ಕಾರದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈ ಭೂಸುಧಾರಣೆಗೆ ಮುಖ್ಯವಾಗಿ ಕೊಟ್ಟಿರುವ ಕಾರಣಗಳೇನೆಂದರೆ, ಕಾಲಾವಕಾಶಬೇಕು. ಚೈನಾ ದುರಾಕ್ರಮಣ, ಮತ್ತು ಹಿಂದಿನ ಸೈನಿಕರಿಗೆ ಸ್ವಂತ ಸಾಗುವಳಿಗೆ ಭೂಮಿಬೇಕು ಎನ್ನುವುದು ಅದರ ಜೊತೆಗೆ Statement of Objects and Reasons ನಲ್ಲಿ *status quo* ಎಂದು ಹೇಳಿದ್ದಾರೆ. ಇದು ನಿಜವಾಗಿಯೂ ವಿರೋಧಾಭಾಸ– ಅದರಲ್ಲಿಯೂ *status quo* ಅನ್ನುವುದು ನಮಗೆ ಸ್ವಾತಂತ್ರ ಬಂದು ಎಷ್ಟೋ ವರ್ಷಗಳಾದುವು. ಈಗ ಒಂದು ಉದಾಹರಣೆ ಕೊಡಬೇಕು. ಮಗು ಹುಟ್ಟಿದ ಸ್ವಲ್ಪ ದಿವಸದಮೇಲೆ ಅಂಬೆಗಾಲು ಇಡುತ್ತದೆ. ಎಂದಿಗೂ ಅದು ಅಂಬೆಗಾಲೇ ಇಟ್ಟುಕೊಂಡಿರಬೇಕೆಂದರೆ ಅದು ಸರ್‌ವೈವ್ ಆಗುವುದಿಲ್ಲ. ಸ್ವಾತಂತ್ರ್ಯ ಬಂದು 15 ವರ್ಷಗಳಾದುವು, ಎಷ್ಟು ವಿರೋಧಾಭಾಸವಾಗಿದೆ ನೋಡಿ. ಈ ಸಂಧರ್ಭದಲ್ಲಿ ಶ್ರೀಮಾನ್ ಕೃಷ್ಣಪ್ಪನವರು ಈ ಸರ್ಕಾರಿ ಧೋರಣೆಯನ್ನು ಗಮನಿಸುವುದು ಅಗತ್ಯ. ಈ ಸಂಧರ್ಭದಲ್ಲಿ ಶ್ರೀಮಾನ್ ಮುಕ್ಕಣ್ಣಪ್ಪನವರು ಎರಡು ಮುಖ್ಯವಾದ ಪಾಯಿಂಟ್ ಹೇಳಿದರು. ಒಂದು ಕಡೆ ಕಾಡು ಕಡಿದು ಹಾಕಿರುವುದಕ್ಕೆ ಸ್ಟೇ ಆರ್ಡರ್ ಕೊಟ್ಟಿರಿ ಎಂದು ಇನ್ನು ಬೇರೆ ಕಡೆ ಕಾಡು ಚೆನ್ನಾಗಿರಲಿಲ್ಲವೇ ? ಅಲ್ಲಿ ಕಾಡನ್ನು ಹಾಳುಮಾಡಿ ಮಳೆ ನಿಲ್ಲಿಸಿ ಬಿಡುತ್ತೀರ ? ಇದು ಮುಖ್ಯವಾದ ಪ್ರಶ್ನೆ. ಇನ್ನೊಂದು ವಿಷಯವೇನೆಂದರೆ ಶ್ರೀ ಕೃಷ್ಣಪ್ಪನವರು ''ಲ್ಯಾಂಡ್ ರಿಫಾರ್ಮ್ಸ್ ಷುರುಮಾಡಿದವರು ನಾವು'' ಎಂದು ಹೇಳಿದರು. ಅದರ ವಿಚಾರದಲ್ಲಿ ನೀವು ಹೇಳಬೇಕಾದ್ದೇ ಇಲ್ಲ ಎನ್ನುವ ರೀತಿಯಲ್ಲಿ ಕೆಲವು ಪ್ರಶ್ನೆಗಳಿಗೆ ಶ್ರೀ ಶಿವಪ್ಪನವರಿಗೆ ಹೇಳಿದರು. ಜನಗಳು ಇದನ್ನೆಲ್ಲಾ ನೋಡಿ ಏನು ಮಾತನಾಡುತ್ತಿದ್ದಾರೆ ಈ ಕಾನೂನು ಜಮೀನುದಾರರನ್ನು ಸ್ವಲ್ಪ ಉಳಿಸಿಕೊಳ್ಳುವುದಕ್ಕೆ ಅವರ ಹಿತವನ್ನು ರಕ್ಷಣೆ ಮಾಡುವುದಕ್ಕೆ ಹೂಡಿರುವ ನಾಟಕ, ಇದರಿಂದ ನಿಜವಾಗಿ ಭೂಸುಧಾರಣೆಯ ಬಗ್ಗೆ ಪ್ರಾಮಾಣಿಕತೆ ಇಲ್ಲ, ಇದನ್ನು ತೋರಿಕೆಗೆ ಇಟ್ಟಿರುವುದು ಎಂದು ಶ್ರೀಮಂತರು ಏನೂ ತಿಳಿದುಕೊಳ್ಳುತ್ತಾರೆಯೋ ? ಜಮೀನುದಾರರು ಏನು ತಿಳಿದುಕೊಳ್ಳುತ್ತಾರೆಯೋ ? ಎಂಬ ಕಳವಳ ಸರ್ಕಾರಕ್ಕೆ ಇನ್ನು ಇದೆ. ಸಾರ್ವಜನಿಕರು ಹೀಗೆಲ್ಲಾ ಮಾತನಾಡಿ ಕೊಳ್ಳುತ್ತಿದ್ದಾರೆ. ಬಹಳ ವರ್ಷಗಳಿಂದ ಭೂಸುಧಾರಣೆ, ಭೂಸುಧಾರಣೆ ಎಂಬ ಕೂಗು ಇದೆ. ಮುಖ್ಯವಾಗಿ ಇದರ ಫಲ ಏನಾಗಿದೆ. ಮುಖ್ಯವಾದ ಗುರಿಯನ್ನು ತಲೆಕೆಳಕು ಮಾಡಿದೆ. ನಾನು ಒಂದು ತರಹ ಅಕಾಡೆಮಿಕ್ಕಾಗಿ ಮಾತನಾಡುವುದಕ್ಕೆ ಮೊದಲು ನಿಜವಾದ ಒಂದು ಚಿತ್ರಕೊಡುವುದಕ್ಕೆ ಬಯಸುತ್ತೇನೆ. ಲ್ಯಾಂಡ್ ರಿಫಾರ್ಮ್ಸ್ ರಿಪೋರ್ಟನ್ನು ಇದೇ ಶ್ರೀಮಾನ್ ಜತ್ತಿಯವರು ತಯಾರಿಸಿದವರು. ಅವರ ರಿಪೋರ್ಟ್ ಬಂದಿತು. ನಾವು ಮೂರು ಜನ ಅಣ್ಣ ತಮ್ಮಂದಿರು, ಆ ವರದಿ ಬರುತ್ತಲೂ ಮಾತನಾಡುವುದಕ್ಕೆ ಷುರುಮಾಡಿದೆವು. ಏನಾದರೂ ಮಾಡಿ ನಮ್ಮ ಜಮೀನನ್ನು ಹಂಚಿಕೋಬೇಕೆಂದು ಈ ಜಮೀನು ಹಂಚಿಕೊಳ್ಳುವುದಕ್ಕೆ ಮುಂಚೆ, ವೈಯಕ್ತಿಕವಾಗಿ ಹೇಳುವುದಾದರೆ ನಾನು ಪಾಪರ್ ಆಗಿದ್ದೆ ನಾವು ಜಮೀನು ಪಂಚಿಕೆ ಮಾಡಿಕೊಂಡೆವು. ಇದು ಇಲ್ಲದೆ ಹೋಗಿದ್ದರೆ ನನ್ನ ಹಿಡುವಳಿಯಿಂದ ನನಗೆ ಎಷ್ಟು ಬರಬೇಕೋ ಅಷ್ಟೂ ಬಂದು (ನಮ್ಮ ಪರ್ಸನಲ್ ಕಲ್ಪಿವೇಷನ್ನಿಗೆ) ಇನ್ನು ಎಲ್ಲರಿಗೂ ಹಂಚುವುದಕ್ಕೂ ಜಮೀನು ಆಗುತ್ತಾ ಇತ್ತು. ಭೂಸುಧಾರಣೆಯ ಮೂಲ ಉದ್ದೇಶವೇನು ? ಉಳುವವನಿಗೆ ಭೂಮಿ ಸಿಕ್ಕಬೇಕು, ಭೂಮಿ ಇಲ್ಲದೆ

(ಶ್ರೀ ವಿ.ಎಂ. ದೇವ್)

ಇದ್ದವರಿಗೆ ಭೂಮಿ ಕೊಡಬೇಕು, ಕಡಿಮೆ ಇರುವವರಿಗೆ ಭರ್ತಿಮಾಡಿ ಕೊಡಬೇಕು. ಈ ಭೂಸುಧಾರಣೆಯನ್ನು ತೆಗೆದುಕೊಂಡರೆ ಈ ಮೂಲ ಉದ್ದೇಶ ವಿಫಲವಾಗಿದೆ. ಒಟ್ಟಿನಲ್ಲಿ ಈ ಭೂಸುಧಾರಣೆ ಮುಂದಕ್ಕೆ ಹೋಗುತ್ತಾ ಹೋಗುತ್ತಾ, ಇದರಿಂದ ಯಾವ ಕಾಲಕ್ಕೂ ಸ್ವಲ್ಪ ಜಮೀನು ಸಿಗದೆ ಇರುವ ಹಾಗಾಗಿದೆ. ವ್ಯವಸಾಯ ಉತ್ಪನ್ನ ಕಡಮೆಯಾಗುತ್ತಾ ಹೋಗಿದೆ ತುರ್ತುಪರಿಸ್ಥಿತಿಯೆಂದು ಹೇಳಿಬಿಟ್ಟರೆ ವ್ಯವಸಾಯ ಉತ್ಪನ್ನ ಕಡಿಮೆಯಾಗಿರುವುದು ಜಾಸ್ತಿಯಾಗುತ್ತದೆಯೋ? ಸರ್ಕಾರದವರು ಹೇಳುವುದರಲ್ಲಿ ವಿರೋಧಾಭಾಸವಿದೆ. *status quo* No. (1). No. 2 National Emergency. Food productionಗೆ ಆಹಾರ ಧಾನ್ಯ ಬೆಳೆಯುವುದಕ್ಕೆ ಒಬ್ಬರಿಗೂ ನೆಮ್ಮದಿ ಇಲ್ಲ.

ಅನೇಕ ಕಡೆಗಳಲ್ಲಿ ಗೇಣೀದಾರರನ್ನು ಜಮೀನ್ದಾರರು ಬಿಡುಗಡೆ ಮಾಡಿರಬಹುದು. ಈ ಬಗೆ ಬೇಕಾದಷ್ಟು ಕೇಸುಗಳು ನಡೆಯುತ್ತಿವೆ. ಅನೇಕ ಸಂದರ್ಭಗಳಲ್ಲಿ ಜಮೀನ್ದಾರರು ಗೇಣಿ ಪಡೆದುಕೊಂಡಿದ್ದರೂ ಗೇಣೀದಾರರಿಗೆ ರಶೀದಿ ಕೊಟ್ಟಿಲ್ಲ. ಇಂಥ ಸಂದರ್ಭಗಳೂ ಅನೇಕವಾಗಿವೆ ಸರ್ಕಾರದವರು ಇಂಥ ಸಂದರ್ಭಗಳಲ್ಲಿ ಏನು ಕ್ರಮಕೈಗೊಂಡಿದ್ದಾರೆ ? ಇಲ್ಲಿ ಪ್ರಾಮಾಣಿಕತೆಯ ಪ್ರಶ್ನೆಯೇ ಇಲ್ಲ. ಸರ್ಕಾರದವರು ಈ ಬಗ್ಗೆ ಬೇಕಾದಷ್ಟು ರೂಲ್ಸುಗಳನ್ನು ಮಾಡಿದ್ದಾರೆ. ಆದರೆ ಪ್ರಯೋಜನವಿಲ್ಲ. ನಾನು ಹೇಳುವುದೇನೆಂದರೆ ಈ ದಿವಸ ಗೇಣಿಕೊಟ್ಟವನೇ ದಡ್ಡ, ಬುದ್ಧಿವಂತನಲ್ಲ ಎಂದು ಹೇಳತಕ್ಕ ಪರಿಸ್ಥಿತಿಯುಂಟಾಗಿದೆ. ಈ ದಿವಸ ಈ ವಿಚಾರವಾಗಿ ನಮ್ಮ ರಾಜ್ಯಪಾಲರು ಅಪ್ಪಣೆಕೊಡಿಸಿರತಕ್ಕ ಭಾಷಣದಲ್ಲಿ ಹೇಳಿರುವುದನ್ನು ನೋಡಿದರೆ ಈ ತಂಟೆತಕರಾರುಗಳೆಲ್ಲ ಸರ್ಕಾರಕ್ಕೆ ಏಕೆ ಉಂಟಾಗಿವೆ ಎಂದರೆ ಸರ್ಕಾರದವರು ಆ ಜತ್ತಿ ಸಮಿತಿಯ ವರದಿಯಲ್ಲಿ ಏನಿತ್ತೋ ಅದರಲ್ಲಿ ಮುಕ್ಕಾಲುಮೂರುವೀಸೆ ಪಾಲು ಬದಲಾಯಿಸಿರುವುದೇ ಇಷ್ಟೆಲ್ಲಾ ತೊಂದರೆಗೆ ಕಾರಣವಾಗಿದೆ ಎಂದು ಹೇಳುತ್ತೇನೆ. ಹಾಗೆ ತಲೆಕೆಳಗು ಮಾಡದಿದ್ದರೆ ಚೆನ್ನಾಗಿರುತ್ತಿತ್ತು ಎಂದು ಹೇಳುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ಇಂಥ ಒಂದು ತಿದ್ದುಪಡಿಯನ್ನು ಇಲ್ಲಿ ತರಬಾರದಾಗಿತ್ತೆಂದು ಹೇಳದೆ ವಿಧಿಯಿಲ್ಲ. ನಮಗೆ ತುರ್ತುಪರಿಸ್ಥಿತಿ ಬಂದಿದ್ದರೆ ನಾವು ಆಹಾರ ಧಾನ್ಯಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ಉತ್ಪತ್ತಿ ಮಾಡಬೇಕು. ಈ ಕೆಲಸಕ್ಕೆ ಅಡ್ಡಿ ಒಡ್ಡಬಾರದು ಎಂದು ಹೇಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯ ಬಗ್ಗೆ ಮಾಡಿರತಕ್ಕ ಚರ್ಚೆಗೆ ಅಷ್ಟೇನೂ ಹೆಚ್ಚಿಗೆ ಉತ್ತರ ಕೊಡಬೇಕಾದ ಅವಶ್ಯಕತೆ ಇರಲಿಲ್ಲ. ಆದರೆ ಶ್ರೀ ಮುಕ್ಕಣ್ಣಪ್ಪನವರು ಮಾಡತಕ್ಕ ಭಾಷಣಕ್ಕೆ ಒಂದು ಕಳೆ ಇದೆ. ಆದರೆ ಬೇರೆಯವರು ಮಾಡತಕ್ಕ ಭಾಷಣಗಳಿಗೆ ಅಂಥ ಕಳೆ ಇರಬಾರದು ; ಏಕೆಂದರೆ ಶ್ರೀಮಾನ್ ಮುಕ್ಕಣ್ಣಪ್ಪನವರು ಮಾಡುವ ಭಾಷಣಕ್ಕೆ ಇರತಕ್ಕ ಕಳೆ ಎಂದರೆ ಅದು ನಾಟ್ಯ ಕಳೆ! ಆದಾಗ್ಯೂ ಅವರು ನಮ್ಮ ಭಾಷಣಗಳಲ್ಲಿ ಆ ಕಳೆಯಿದೆ ಎಂದು ಹೇಳುತ್ತಾರೆ. ಆದರೆ ಅದು ಎಷ್ಟರಮಟ್ಟಿಗೆ ನಿಜವೋ ಅದನ್ನು ನಾನು ಹೇಳಲಾರೆ. ಅವರು ಭಾಷಣ ಮಾಡುವಾಗ ಒಂದು ನಾಟಕವನ್ನೇ ಆಡಿಬಿಡುತ್ತಾರೆ. ಅವರು ಕೈ-ತಲೆ, ಕಾಲು ಆಡಿಸುವುದೇ ಬಹಳ ಜಾಸ್ತಿ. ಹಾಗಿರುವಾಗ ಅವರು ನಮಗೆ ಈ ವಿಚಾರದಲ್ಲಿ ಬುದ್ಧಿ ಹೇಳತಕ್ಕ ಮಟ್ಟದಲ್ಲಿಲ್ಲ. ಒಂದು ವೇಳೆ ಇಲ್ಲಿ ಫಿಲಂ ಷೂಟಿಂಗ್ ಮಾಡತಕ್ಕ ಯಂತ್ರೋಪಕರಣವಿಟ್ಟು ಅವರು ಭಾಷಣ ಮಾಡುವ ಕಾಲದಲ್ಲಿ ಹೇಗೆ ಕೈ-ಕಾಲು-ತಲೆ ಆಡಿಸುತ್ತಾರೆಂಬುದನ್ನು ಫೋಟೋ ತೆಗೆದಿದ್ದರೆ ಅವರಿಗೆ ಆಗ ಅವರ ವರ್ತನೆಗಳು ಹೇಗಿರುತ್ತವೆಂಬುದು ಗೊತ್ತಾಗುವುದು. ಈ ಹಿಂದೆ ಮುಮ್ಮಡಿ ಕೃಷ್ಣರಾಜಒಡೆಯರ ಕಾಲದಲ್ಲಿ ಅಡಿಗೆ ಮಾಡುತ್ತಿದ್ದವನಿಗೆ ಯಾರಿಗೋ ಒಬ್ಬನಿಗೆ ಅಮಲ್ದಾರಿ ಕೆಲಸ ಕೊಟ್ಟಿದ್ದರಂತೆ! ಆ ಕೆಲಸವನ್ನು ಅವನಿಗೆ ಕೊಟ್ಟು "ನೀನು ಜನರಲ್ಲಿ ಸಲಿಗೆಯಿಂದ ಇರಬಾರದು-ಅವರಿಗೆ ಸ್ವಲ್ಪ ಭಯವಾಗುವಂತೆ ಇರಬೇಕು" ಎಂದು ಹೇಳಿದ್ದರಂತೆ. ಅದಕ್ಕೆ ಆತ ನಂಜನಗೂಡಿಗೆ ಅಮಲ್ದಾರನಾಗಿ ಹೋಗುವಾಗ ಮುಖಕ್ಕೆಲ್ಲ ಮಸಿ ಬಳಿದುಕೊಂಡು ಜನರಿಗೆ ಭಯವಾಗುವಂತೆ ಹೋಗಿದ್ದನೆಂದು ಹೇಳುತ್ತಾರೆ! ನಾನು ಈ ಹಿಂದೆ ಹೇಳಿದ್ದ ವಿಚಾರವನ್ನು ಶ್ರೀ ಮುಕ್ಕಣ್ಣಪ್ಪನವರೂ ಹೀಗೇ ತಿಳಿದುಕೊಂಡಿರುವಂತೆ ಕಾಣುತ್ತದೆ. "ಹಸ್ತೆ ಹಸ್ತೆ ಲಡಾಯಿ ಕರ್ನಾ" ಅಂದರೆ ನಗುನಗುತ್ತಾ ಯುದ್ಧ ಮಾಡಬೇಕು ಎಂದು ದೊಡ್ಡವರೂ ಮಹನೀಯರೂ ಹೇಳುತ್ತಾರೆ. ಹಾಗೆ ನಾನೂ ಸಹ ಕೆಲವು ವಿಚಾರಗಳನ್ನು ನಗುತ್ತ ಹೇಳಿದ್ದರೆ ಆ ವಿಚಾರವನ್ನು ನಾನು ಲಘುವಾಗಿ ಹೇಳಿದೆನೆಂದು ಅವರು ಅರ್ಥಮಾಡಿಕೊಂಡಿದ್ದರೆ, ಅದು ಅವರ ತಪ್ಪು. ನಾನು ಈ ಹಿಂದೆಯೇ ಶ್ರೀ ಮುಕ್ಕಣ್ಣಪ್ಪನವರಿಗೆ ಒಂದು ಮಾತು ಹೇಳಿದ್ದೆ. ಈಗ ಮತ್ತೆ ಅದನ್ನೇ ಅವರಿಗೆ ಹೇಳಬೇಕಾಗಿದೆ.

"ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ।
ಗದ್ದಲವ ಕುಂಟಿ ಪ್ರಸಿದ್ಧನಾಗುತಿಹೆ।
ಉದ್ಧರಿಸುವೆ ಜಗವನೆನ್ನುತಿಹೆ। ಎನ್ನ ಉದ್ಧಾರವೆಷ್ಟಾಯಿತೋ-
ಓ ಮಂಕುತಿಮ್ಮ" ಎಂಬುದಾಗಿ

ಶ್ರೀ ಡಿ. ವಿ. ಜಿ. ಅವರು ಹೇಳಿದ್ದಾರೆ. ಹೀಗೆ ಚರ್ಚೆಯಲ್ಲಿ ಎದ್ದು ಬಿದ್ದು ಸೋಲುತ್ತಿರುವ ಶ್ರೀ ಮುಕ್ಕಣ್ಣಪ್ಪನವರು ಈ ವಿಚಾರದಲ್ಲಿ ನಮಗೆ ಅವರು ಬುದ್ಧಿ ಹೇಳುವ ಪರಿಸ್ಥಿತಿಯಲಿಲ್ಲ. ಈ ಹಿಂದೆ ನಾನು ಬಗರ್ ಸಾಗುವಳಿ ಮಾಡಿದ್ದವರಿಗೇ ಆ ಜಮೀನನ್ನು ಬಿಟ್ಟುಕೊಡಬೇಕೆಂದು ಎಲ್ಲಿಯೂ ಹೇಳಿಲ್ಲ. ಕೆಲವು ಕ್ಲಿಷ್ಟ ಪರಿಸ್ಥಿತಿಯಲ್ಲಿ ಅಂದರೆ ಜಮೀನ್ದಾರರು ತನಗಿರತಕ್ಕ ಜಮೀನಿನ ವಿಸ್ತೀರ್ಣ ವೆಷ್ಟು ಎಂಬುದೇ ಗೊತ್ತಿಲ್ಲದ ತಿಳಿವಳಿಕೆ ಇಲ್ಲದೆ ಬಗರ್ ಹುಕುಂನಿಂದ ಜಮೀನನ್ನು ಒತ್ತರಿಸಿ ಕೊಂಡಿದ್ದರೆ ಒಂದು ಎಕರೆಗೆ ಬದಲು ತನ್ನ ಪಕ್ಕದ ಬಂಜರ್ ಜಮೀನಿನಲ್ಲಿ ಮತ್ತೊಂದು ಎಕರೆ ಸೇರಿಸಿ ಮೂರು ಎಕರೆ ಸಾಗುವಳಿ ಮಾಡಿಕೊಂಡು 7-8 ವರ್ಷಗಳ ಅನುಭವ ಪಡೆದಿದ್ದಾಗ, ಅಲ್ಲಿ ಜಮೀನಿಲ್ಲದ ಜನಗಳು ಯಾರೂ ಇಲ್ಲದಿದ್ದರೆ ಅಂಥ ಸಂದರ್ಭದಲ್ಲಿ ಮಾತ್ರ ಆ ಬಗರ್ ಹುಕುಂ ಸಾಗುವಳಿ ಮಾಡಿದ್ದ ಜಮೀನನ್ನು ಆ ರೈತನಿಗೇ ಕೊಡಬಹುದು ಎಂದು ಹಿಂದೆ ಹೇಳಿದ್ದ ಜ್ಞಾಪಕ ವಿದೆ. ಅಷ್ಟೇ ವಿನಾ ನಾನೆಂದೂ ಲಘುವಾಗಿ ಮಾತನಾಡಿಲ್ಲ. ಈ ದಿವಸ ಈ ಸಭೆಯ ಮುಂದಿಟ್ಟಿರತಕ್ಕ ತಿದ್ದುಪಡಿ ಮಸೂದೆಗಳಲ್ಲಿ ಏನಿದೆ ಎಂಬುದನ್ನು ಸದಸ್ಯರು ಅರ್ಥಮಾಡಿಕೊಂಡಿದ್ದರೆ ಅದೆಲ್ಲವೂ ಕೇವಲ ಗೇಣೀದಾರರ ಹಿತರಕ್ಷಣೆಗೇ ವಿನಾ ಬೇರೆ ಅಲ್ಲ ಎಂಬುದು ಅವರಿಗೇ ಗೊತ್ತಾಗುತ್ತದೆ. ಈ ದಿವಸ ಈ ಸಭೆಯಲ್ಲಿ ಮಾನ್ಯ ಸದಸ್ಯರು ಯಾರು ಯಾರು ಗೇಣೀದಾರರ ಹಿತರಕ್ಷಣೆ ಮಾಡಬೇಕೆಂದು ವಾದ ಮಾಡಿದ್ದಾರೋ ಆ ಉದ್ದೇಶದಿಂದಲೇ ಸರ್ಕಾರದವರು ಈ ದಿವಸ ಈ ತಿದ್ದುಪಡಿಗಳನ್ನು ಸಭೆ ಮುಂದೆ ಇಟ್ಟಿದ್ದಾರೆ. ಹೀಗಿರುವಾಗ ಕೆಲವು ಮಾನ್ಯ ಸದಸ್ಯರು ಭೂಸ ಧಾರಣೆ ಶಾಸನವಿನ್ನೇನು ಕೇವಲ 5-6 ತಿಂಗಳಲ್ಲಿ ಜಾರಿಗೆ ಬರುತ್ತಿತ್ತು, ಅದನ್ನು ಹಿಂದಕ್ಕೆ ತಳ್ಳಿ ಆ ವೇಳೆಯಲ್ಲಿ ಗೇಣೀದಾರರುಗಳನ್ನೆಲ್ಲ ಹೋಲ್‌ಸೇಲಾಗಿ ಎವಿಕ್ಟ್ ಮಾಡಿಸಲು ಅವಕಾಶಕೊಡುತ್ತಿದ್ದಾರೆಂಬಂತೆ ಮಾತನಾಡಿದ್ದಾರೆ ಆದರೆ ಈ ವಾದದಲ್ಲಿ ತಿರುಳಿಲ್ಲ. ಈ ದಿ ಸ ಗೇಣೀದಾರರಿಗೆ ಇರುವಷ್ಟು ರಕ್ಷಣೆ ಭೂಮಾಲೀಕರಿಗಿಲ್ಲ. ಅನೇಕ ಜಮೀನ್ದಾರರಿಗೆ ಬಹಳ ತೊಂದರೆ ಆಗಿದೆ. ಗ್ರಾಮ್ಯಭಾಷೆಯಲ್ಲಿ ಹೇಳುವುದಾದರೆ "ನಾಯಿ ಬಾಲ ಅಲ್ಲಾಡಿಸುವುದಕ್ಕೆ ಬದಲಾಗಿ ಈಗ ಬಾಲವೇ ನಾಯಿಯನ್ನು ಅಲ್ಲಾಡಿಸುವಂತೆ ಆಗಿದೆ" ಎಂದು ಹೇಳಬಹುದು. ಈ ಹಿಂದೆ ಟೆನೆಂಟ್ಸ್ ಜಮೀನ್ದಾರರ ಮರ್ಜಿ ಕಾಯಬೇಕಾಗಿತ್ತು. ಈಗ ಅದು ಹೋಗಿ ಜಮೀನ್ದಾರರೇ ಟೆನೆಂಟ್ಸ್‌ಗಳ ಮರ್ಜಿ ಕಾಯುವ ಕಾಲಬಂದಿದೆ. ಗೇಣಿಯನ್ನು ಕ್ಯಾಷ್‌ರೂಪದಲ್ಲಿ ತೆಗೆದುಕೊಳ್ಳುವ ಜಮೀನ್ದಾರರ ಕಷ್ಟ ಅಷ್ಟಿಷ್ಟಲ್ಲ. ಈ ಹಿಂದೆ ಏನು 20-25 ರೂ.ಗಳ ಕ್ಯಾಷ್ ಗೇಣಿ ಮೊಕರೂರಾಗಿತ್ತೋ ಈಗಲೂ ಅಷ್ಟೇ ಇದೆ ಅದು. ಹೀಗಾಗಿ ಈ ದಿವಸ ಆ ಜಮೀನ್ದಾರರು ಆ ಹಣವನ್ನೆಲ್ಲ ಕಂದಾಯ ಮತ್ತು ಸರ್‌ಛಾರ್ಜುಗಳನ್ನು ಕೊಡಲು ಸಾಲುವುದಿಲ್ಲ. ಇಂಥಾ ಪರಿಸ್ಥಿತಿಗಳೂ ಇವೆ. ಬೆಳೆ ರೂಪದಲ್ಲಿ ಗೇಣಿ ಪಡೆಯತಕ್ಕವರಿಗೆ ಪರವಾ ಇಲ್ಲ. ಇತ್ತೀಚೆಗೆ ಅಡಕೆಗೆ ಧಾರಣೆ ಹೆಚ್ಚಿದ ಮೇಲಂತೂ ಭೂಮಾಲೀಕರಲ್ಲಿ ಕ್ಯಾಷ್‌ರೂಪದಲ್ಲಿ ಗೇಣಿ ತೆಗೆದುಕೊಳ್ಳುವವರಿಗೆ ಬಹಳ ತೊಂದರೆಯಾಗಿದೆ. ಆದಾಗ್ಯೂ ನಾವೀಗ ಕೇವಲ ಗೇಣೀದಾರರ ಹಿತರಕ್ಷಣೆ ಮಾತ್ರ ಮಾಡಿದ್ದೇವೆ. ಹೀಗಿದ್ದರೂ ಕೆಲವು ಮಾನ್ಯ ಸದಸ್ಯರು ಸರ್ಕಾರವನ್ನು ಟೀಕೆ ಮಾಡುವುದು ಸರಿಯಾದ್ದಲ್ಲ. ಆ ಭೂಸುಧಾರಣೆ ಕಾನೂನು ಈವರೆಗೆ ಜಾರಿಗೆ ಬಂದಿದ್ದಲ್ಲಿ ಅನೇಕ ರೈತರು ಆ ಜಮೀನನ್ನೂ ಬೇರೆಯವರಿಗೆ ಮಾರಾಟ ಮಾಡಿ ಯಥಾಪ್ರಕಾರ ಭೂಹೀನರಾಗೇ ಇರುತ್ತಿದ್ದರು. ಅದಕ್ಕೆ ಅವಕಾಶವಿಲ್ಲದಂತಾಗಿದೆ. ಈ ದಿವಸ ಒಕ್ಕಲನ್ನು ಎಬ್ಬಿಸಲು ಯಾರಿಗೂ ಶಕ್ಯವಿಲ್ಲ. ಅಂಥಾ ಒಂದು ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸಿದ್ದೇವೆ. ಈ ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಂದು ದಿವಸ ಒಬ್ಬ ಸೊಸೆ ಯಾರೋ ಭಿಕ್ಷುಕನಿಗೆ ಪಾತ್ರೆಯಲ್ಲಿದ್ದ ಅಕ್ಕಿಯನ್ನು ಭಿಕ್ಷ ಹಾಕಿದಳಂತೆ. ಹಾಗೆ ಭಿಕ್ಷ ಹಾಕಿದ್ದನ್ನು ಕಂಡ ಅತ್ತೆ ಆ ಭಿಕ್ಷುಕನನ್ನು ಕರೆದು ಆ ಅಕ್ಕಿಯನ್ನೆಲ್ಲ ವಾಪಸ್ಸು ತೆಗೆದುಕೊಂಡು ಆ ಭಿಕ್ಷುಕನನ್ನು ಬರಿಗೈಯಲ್ಲಿ ಕಳುಹಿಸಿ—ಆತ ಸ್ವಲ್ಪ ದೂರ ಹೋದನಂತರ ಮತ್ತೆ ಆತನನ್ನು ಕರೆದು ಮನೆಯಲ್ಲಿರತಕ್ಕ ಸೊಸೆಗೆ ಭಿಕ್ಷಹಾಕಲು ಅಧಿಕಾರವೆಲ್ಲಿದೆ? ಆ ಅಧಿಕಾರವೆಲ್ಲ ಅತ್ತೆಯಾದ ನನಗೊಬ್ಬಳಿಗೇ ಇರುವುದು ಎಂದು ಹೇಳಿ ಮತ್ತೆ ಆ ಅಕ್ಕಿಯನ್ನೇ ಆ ಭಿಕ್ಷುಕನಿಗೆ ಹಾಕಿ ಕಳುಹಿಸಿದಳಂತೆ. ಹೀಗೆ ಸರ್ಕಾರದವರು ಗೇಣೀದಾರನ ರಕ್ಷಣೆ ಮಾಡಿದರೆ ಅದು ರಕ್ಷಣೆ ಆಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದರೆ ಅವರ ರಕ್ಷಣೆ ಆಗುತ್ತದೆಂಬುದು ಬಹಳ ವಿಚಿತ್ರವಾಗಿದೆ. ಈ ವಾದ ಅತ್ತೆ-ಸೊಸೆಯರ ಕಿತ್ತಾಟದಂತಾಗಿದೆ.

(ಶ್ರೀ ಎಂ. ವಿ. ಕೃಷ್ಣಪ್ಪ)

ರೈತರಿಗೆ ರಕ್ಷಣೆ ಕೊಡುವುದು ಬೇಡ ಎಂದು ಮಸೂದೆಯನ್ನು ತಂದಿದ್ದರೆ ನೀವೆಲ್ಲ ರಕ್ಷಣೆ ಕೊಡಬೇಕು ಎಂದು ಹೇಳುತ್ತಿದ್ದಿರಿ. ಈ ತರಹ ಧೋರಣೆಯಿಂದ ಯಾರಿಗೂ ಧರ್ಮವಲ್ಲ, ರೈತರಿಗೂ ಧರ್ಮವಲ್ಲ, ನಮಗೂ ಧರ್ಮವಲ್ಲ. ಭೂಸುಧಾರಣೆಯನ್ನು ಜಾರಿಗೆ ತರದೆ ಇದ್ದ ಉದ್ದೇಶವನ್ನು ನಾನು ಹೇಳಿದ್ದೇನೆ. ಬೇಗ ಜಾರಿಗೆ ತರಬೇಕು ಎಂದು ಉದ್ದೇಶವಿದ್ದರೂ ಕೂಡ ರಾಜ್ಯಾಂಗಕ್ಕೆ ತಿದ್ದುಪಡಿಯಾಗಬೇಕಾಗಿರುವುದರಿಂದ ಸಾಧ್ಯವಿಲ್ಲವಾಗಿದೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಗುಪ್ಪ).—ಕಾನೂನು ಭಯದಿಂದ ನೂರಕ್ಕೆ ತೊಂಬತ್ತು ಜನ ಒಡೆಯರು ಸಾಗುವಳಿ ಚೀಟಿಯನ್ನು ಬರೆದುಕೊಡುತ್ತಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳುವುದು ನಿಜ. ಶ್ರೀಮಾನ್ ತಿಮ್ಮಪ್ಪಗೌಡರೂ ಮತ್ತು ಶ್ರೀಮಾನ್ ಮಂಜಯ್ಯಶೆಟ್ಟರೂ ಹೇಳಿದ್ದೂ ನಿಜ. ಶ್ರೀಮಾನ್ ಮಂಜಯ್ಯಶೆಟ್ಟರು ಹೇಳಿದ ಸ್ಥಳದಲ್ಲಿ Tenants dictate the land owners ಗೇಣೀದಾರರನ್ನು ಬಿಡಿಸುವುದು, ಗೇಣಿಯನ್ನು ಕೊಟ್ಟಿದ್ದರೂ ಕೊಟ್ಟಿಲ್ಲವೆಂದು ಹೇಳುವುದು ಇವೆಲ್ಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುವುದಿಲ್ಲ.

In South Kanara and North Kanara the tenants are so enlightened and so much organised that they cannot be cheated. What Sri Manjaya Shetty said is therefore correct. ಶ್ರೀ ಜಿ. ಎ. ತಿಮ್ಮಪ್ಪಗೌಡರು ಹೇಳಿದ್ದೂ ನಿಜ. ಅವರು ಹೇಳಿದ ಕಡೆಯಲ್ಲಿ ಗೇಣೀದಾರರು ಅವಿದ್ಯಾವಂತರು ಕಾನೂನು ರಕ್ಷಣೆ ಕೊಟ್ಟರೂ ಮೋಸ ಮಾಡಬಹುದು. He is also correct because the tenants are illiterate and ignorant. In spite of the protections we offer, they are evicted. ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿದ್ದೆ. ಅಲ್ಲಿ ಗೇಣಿದಾರರೆಲ್ಲ ಸುಖವಾಗಿದ್ದಾರೆ. The operation of the tenancy laws is well known in South and North Kanara where the tenants are highly educated, highly conscious and highly organised. In spite of this, if it is said that they are evicted, it cannot be believed. Landlords are in great trouble there.

(Interruption)

But it cannot be applied all over the State. Wherever the tenants are illiterate and ignorant, inspite of all protection given by us, the poor tenants cannot be helped because what has happened to them from the days of Rama and Bharatha ? Till they are enlightened and educated, we cannot do much for them.

ರೈತರಿಗೆ ರಕ್ಷಣೆ ಕೊಡಬೇಕೆಂದು ತಂದಿರುವ ಈ ಮಸೂದೆಯನ್ನು ಮಾನ್ಯಸಭೆ ಒಪ್ಪಿಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—The question is :

"That the Mysore Tenants (Temporary Protection from Eviction) Bill, 1963, be taken into consideration."

The motion was adopted.

CLAUSES 2 AND 3.

Mr. SPEAKER.—The question is :

"That clauses 2 and 3 stand part of the Bill"

The motion was adopted.

Clauses 2 and 3 were added to the Bill.

CLAUSE 1, TITLE AND PREAMBLE.

Mr. SPEAKER.—The question is:

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri M. V. KRISHNAPPA.—I beg to move:

"That the Mysore Tenants (Temporary Protection from Eviction) Bill, 1963, be passed."

Mr. SPEAKER.—The question is:

"That the Mysore Tenants (Temporary Protection from Evictio) Bill, 1963, be passed."

The motion was adopted.

MYSORE POLICE BILL, 1962.

Motion to consider.

Sri R. M. PATIL.—(Minister for Home).—I beg to move:

"That the Mysore Police Bill, 1962, be taken into consideration."

Mr. SPEAKER.—Motion moved:

"That the Mysore Police Bill, 1962, be taken into consideration."

Sri R. M. PATIL.—Sir, this is a Bill intended to secure uniformity of law in the entire State. Now, there are five differences in force in the five regions of the State and there is no uniformity in administration. The 18 different Acts now in force would be merged into a single piece of legislation. We find many difficulties in interpreting the laws in different areas.

The Bill contains important provisions to prevent gambling and for the constitution of the village police force and the like. Most important of them is the creation of a Police Commissioner for Bangalore and a police force for this city. In addition the system of reserve police in vogue in Bombay area will remain a permanent feature throughout the State.

Comming to the financial commitments, at the time the Bill was introduced we have indicated a certain figure. Unfortunately, the Bill could not be passed then. There is also the question of delegated powers provided for in this Bill.

5-30 P.M.

Regarding Delegated Legislation, Clause 24 empowers the Inspector General of Police to make rules or orders, subject to the orders of the